
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

21 ಜನವರಿ 2026 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 308 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾರತ ಮತ್ತು ಐರೋಪ್ಯ ಒಕ್ಕೂಟವು ಐತಿಹಾಸಿಕ ವ್ಯಾಪಾರ ಒಪ್ಪಂದದ ಹೊಸ್ತಿಲಿನಲ್ಲಿ ನಿಂತಿವೆ ಎಂದು ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ಅವರು ಮಂಗಳವಾರ ಹೇಳಿದ್ದಾರೆ.



ಮಾವಿನಲ್ಲಿ ಹುಳಗಳ ನಿಯಂತ್ರಣ ಸಾಧ್ಯವೇ ? » 2


ಮಕ್ಕಳಿಗೆ ಸಂಸ್ಕೃತಿ, ಮಾನವೀಯ ಮೌಲ್ಯ ಕಲಿಸಿ » 3


ಬೆಳಗುಂಬದಲ್ಲಿ ಶಿಲಾಯುಗ ನಿಲುವುಗಲ್ಲು, ಶಾಸನ ಪತ್ತೆ » 4


# ಶೀಘ್ರ ದಕ್ಷಿಣ ಭಾರತ ಸಿಎಂಗಳ ಸಮ್ಮೇಳನ

## ಒಕ್ಕೂಟ ವ್ಯವಸ್ಥೆ ಭಿಕ್ಷೆಯಲ್ಲ ಸಾಂವಿಧಾನಿಕ ಹಕ್ಕು : ಕೇಂದ್ರದ ವಿರುದ್ಧ ಸಿದ್ದರಾಮಯ್ಯ ವಾಗ್ದಾಳಿ

• ಪ್ರಜೋದಯ ವರದಿ

**ಬೆಂಗಳೂರು:** ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ಕೈಗೊಳ್ಳುತ್ತಿರುವ ನಿರ್ಧಾರಗಳ ಕುರಿತು ಚರ್ಚಿಸಲು ಶೀಘ್ರದಲ್ಲೇ ದಕ್ಷಿಣ ಭಾರತದ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಸಮಾಜವಾದಿ ಅಧ್ಯಯನ ಕೇಂದ್ರ ಮತ್ತು ಸಮಾಜವಾದಿ ಸಮಾಗಮ ಸಂಸ್ಥೆ ಆಯೋಜಿಸಿದ್ದ ದಕ್ಷಿಣ ಭಾರತ ಸಮಾಜವಾದಿಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದು, ಇದರಿಂದ ರಾಜ್ಯಗಳಿಗೆ ಕೇಂದ್ರದಿಂದ ಬರಬೇಕಾದ ಅನುದಾನ ಕಡಿಮೆಯಾಗಿದೆ. ಅದರಲ್ಲೂ ದಕ್ಷಿಣ ಭಾರತದ ರಾಜ್ಯಗಳಿಗೆ ಹೆಚ್ಚು ಅನ್ಯಾಯವಾಗುತ್ತಿದೆ. ಇದನ್ನು ಪ್ರಜಾಸತ್ತಾತ್ಮಕವಾಗಿಯೇ ಪ್ರಶ್ನಿಸಬೇಕಾಗಿದೆ ಎಂದು ಹೇಳಿದರು.

ಒಕ್ಕೂಟ ವ್ಯವಸ್ಥೆಯನ್ನು ಬಲವಂತವಾಗಿ ಕೇಂದ್ರೀಕರಣ ಮಾಡುತ್ತಿರುವ



ಅಪಾಯಕಾರಿ ಬದಲಾವಣೆಗೆ ದೇಶ ಸಾಕ್ಷಿಯಾಗುತ್ತಿದೆ. ದೆಹಲಿಯಲ್ಲೇ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿದೆ ಮತ್ತು ಅವುಗಳನ್ನು ರಾಜ್ಯಗಳ ಮೇಲೆ ಬಲವಂತವಾಗಿ ಹೇರಲಾಗುತ್ತಿದೆ. ಅಲ್ಲದೆ ಅದನ್ನು ಸುಧಾರಣೆ ಎಂದು ಸಂಭ್ರಮಿಸಲಾಗುತ್ತಿದೆ ಎಂದು ಹೇಳಿದರು.

ಒಕ್ಕೂಟ ವ್ಯವಸ್ಥೆಯು ಒಂದು ಆಯ್ಕೆಯಲ್ಲ, ಅದು ನಮ್ಮ ಸಂವಿಧಾನದ ಆತ್ಮ. ಸಂವಿಧಾನ ಸಭೆಯಿಂದ ಸಮಕಾಲೀನ ಚರ್ಚೆಗಳವರೆಗೆ ಈ ತತ್ವವು ಪ್ರತಿಧ್ವನಿಸುತ್ತಿದೆ. ಒಕ್ಕೂಟ ವ್ಯವಸ್ಥೆಯು ಭಿಕ್ಷೆಯಲ್ಲ, ಸಾಂವಿಧಾನಿಕ ಹಕ್ಕು. ರಾಜ್ಯಗಳ ಹಕ್ಕು, ಒಕ್ಕೂಟ ವ್ಯವಸ್ಥೆ, ಸಾಂವಿಧಾನಿಕ ನ್ಯಾಯದ ರಕ್ಷಣೆಗಾಗಿ ಎಲ್ಲರೂ ಒಗ್ಗೂಡಬೇಕಿದೆ. ಹೋರಾಟ ನಡೆಸಬೇಕಿದೆ. ಭಾರತದ ಬಲವು ಏಕತೆ ಮತ್ತು ಸ್ವಾಯತ್ತತೆಯ ನಡುವಿನ ಸಮತೋಲನದಲ್ಲಿದೆ ಎಂಬುದನ್ನು ಡಾ.ಬಿ.ಆರ್.ಅಂಬೇಡ್ಕರ್ ನೆನಪಿಸಿದ್ದರು. ಆದರೆ, ಇಂದು ಆ ಸಮತೋಲನವನ್ನು ಉದ್ದೇಶಪೂರ್ವಕವಾಗಿ ಅಸ್ಥಿರಗೊಳಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಭಾರತದ ಒಕ್ಕೂಟ ವ್ಯವಸ್ಥೆ ಎಂದರೆ ಕೇಂದ್ರ ಸರ್ಕಾರ ಅನೇಕ ರಾಜ್ಯಗಳನ್ನು ಆಳುವುದಲ್ಲ, ಬದಲಾಗಿ ಅನೇಕ ರಾಜ್ಯಗಳು ಒಂದು ಒಕ್ಕೂಟವನ್ನು ಬಲಪಡಿಸುವುದು. ಭಾರತದ ಒಕ್ಕೂಟ ಪ್ರಜಾಪ್ರಭುತ್ವದ ಮೂಲಾಧಾರಗಳೇ ಒತ್ತಡಕ್ಕೆ ಸಿಲುಕಿವೆ. ಭಾರತ ಎಂಬ ಪರಿಕಲ್ಪನೆಯೇ ಇಂದು ಪರೀಕ್ಷೆಗೆ ಒಳಗಾಗುತ್ತಿದೆ. ರಾಜ್ಯಗಳ ಮೇಲೆ ಕೇಂದ್ರದ ನಿಯಂತ್ರಣವನ್ನು ಹೇರಲಾಗುತ್ತಿದೆ. ಆದರೆ, ರಾಜ್ಯಗಳು ದೆಹಲಿಯ ಮುನ್ಸಿಪಾಲಿಟಿಗಳಲ್ಲ. ಕೃಷಿ, ಆರೋಗ್ಯ, ಶಿಕ್ಷಣ, ನೀರು

### ಒಕ್ಕೂಟ ತತ್ವದ ದಮನ

**ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ನಂಬಿಕೆಯ ಬದಲಿಗೆ ನಿಯಂತ್ರಣವನ್ನು ಮತ್ತು ಸಹಭಾಗಿತ್ವದ ಬದಲಿಗೆ ಶಿಕ್ಷೆಯನ್ನು ನೀಡುತ್ತಿದೆ. ತೆರಿಗೆ ಹಂಚಿಕೆಯನ್ನು ಕಡಿತಗೊಳಿಸುವ ಮೂಲಕ ಮತ್ತು ಸೆಸ್ ಹಾಗು ಸರ್‌ಚಾರ್ಜ್‌ಗಳ ಮೂಲಕ ಸಂಪನ್ಮೂಲಗಳನ್ನು ಕಬಳಿಸುತ್ತಿದೆ. ಆರ್ಥಿಕ ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡಿದೆ. ರಾಜ್ಯಗಳನ್ನು ಅಧಿಕಾರವಿಲ್ಲದ ಕೇವಲ ಅನುಷ್ಠಾನಕಾರರನ್ನಾಗಿ ಮಾಡಲಾಗಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್ ದೇಶಕ್ಕೆ ಮೂರು ಪ್ರಮುಖ ಬಿಕ್ಕಟ್ಟುಗಳನ್ನು ತರುತ್ತಿವೆ. ಕ್ಷೇತ್ರ ಮರುವಿಂಗಡಣೆ, ಸಾಂವಿಧಾನಿಕ ತತ್ವಗಳ ನಾಶ ಮತ್ತು ಆರ್ಥಿಕ ಒಕ್ಕೂಟ ತತ್ವದ ದಮನವೆಂದು ಮುಖ್ಯಮಂತ್ರಿ ವಾಗ್ದಾಳಿ ನಡೆಸಿದರು.**

ಹಾಗು ಸಂಸ್ಕೃತಿ ರಾಜ್ಯದ ವಿಷಯಗಳು. ಆದರೂ, ಇಂದು ರಾಜ್ಯಗಳ ಜೊತೆಗಿನ ಸಮಾಲೋಚನೆಯೇ ಇಲ್ಲದೆ ನಿರ್ಧಾರಗಳನ್ನು ಹೇರಲಾಗುತ್ತಿದೆ ಎಂದರು.

ಒಮ್ಮತವಿಲ್ಲದ ಶಿಕ್ಷಣ ನೀತಿ (ಎನ್ಇಪಿ), ರಾಜ್ಯಗಳ ಒಪ್ಪಿಗೆಯಿಲ್ಲದ ಕೃಷಿ ಕಾಯ್ದೆಗಳು, ಪರಿಹಾರದ ಖಚಿತತೆಯಿಲ್ಲದ ಜಿಎಸ್‌ಟಿ ಇವು ಸಾಂವಿಧಾನಿಕ ನೈತಿಕತೆಯನ್ನು ನಾಶ ಮಾಡುತ್ತಿವೆ. ಚುನಾಯಿತ ಸರ್ಕಾರಗಳ ಸಲಹೆಯಂತೆ ನಡೆಯಬೇಕಾದ ರಾಜ್ಯಪಾಲರನ್ನು ರಾಜ್ಯಗಳ ಆಡಳಿತಕ್ಕೆ ಅಡ್ಡಿಪಡಿಸಲು ಬಳಸಿಕೊಳ್ಳಲಾಗುತ್ತಿದೆ. ಕೇಂದ್ರ ಸರ್ಕಾರವು ಹಣವನ್ನು ತಡೆಹಿಡಿದಾಗ, ವಿಪತ್ತು ಪರಿಹಾರವನ್ನು ವಿಳಂಬಗೊಳಿಸಿದಾಗ ಮತ್ತು ಏಕರೂಪದ ನೀತಿಗಳನ್ನು ಹೇರಿದಾಗ, ಅದು ಕೇವಲ ಒಕ್ಕೂಟ ವ್ಯವಸ್ಥೆಯ ಉಲ್ಲಂಘನೆಯಲ್ಲ, ಬದಲಾಗಿ ಸಂವಿಧಾನದ ಸಮಾಜವಾದಿ ಚೈತನ್ಯಕ್ಕೆ ಮಾಡುತ್ತಿರುವ ದ್ರೋಹ ಎಂದರು.

ಕಾಂಗ್ರೆಸ್ ನೇತೃತ್ವದಲ್ಲಿ, ಭಾರತವು ಸಾಮಾಜಿಕ ನ್ಯಾಯ ಮತ್ತು

» ನಾಲ್ಕನೇ ಪುಟದಲ್ಲಿ

# ಆರೋಗ್ಯ ಸಮಸ್ಯೆ ಮುಚ್ಚಿಟ್ಟುಕೊಳ್ಳದಿರಿ

## ಉಚಿತ ಆರೋಗ್ಯ ಶಿಬಿರದಲ್ಲಿ ನಿರ್ಮಲಾನಂದನಾಥ ಶ್ರೀ ಸಲಹೆ



• ಪ್ರಜೋದಯ ವರದಿ

**ಹಾಸನ:** ರೋಗ ಬರುವುದು ದೊಡ್ಡ ಸಮಸ್ಯೆಯಲ್ಲ, ರೋಗ ಬಂದಾಗ ಆಸ್ಪತ್ರೆಗೆ ಹೋದರೆ ತಪ್ಪು ತಿಳಿದುಕೊಳ್ಳುತ್ತಾರೋ ಎಂದು ಅಂಜಿಕೆಯಿಂದ ರೋಗವನ್ನು ದೊಡ್ಡದು ಮಾಡಿಕೊಳ್ಳುವುದು ದೊಡ್ಡ ತಪ್ಪು. ಹಿಂಜರಿಕೆಯಿಂದ ಆರೋಗ್ಯ ಸಮಸ್ಯೆ ಮುಚ್ಚಿಟ್ಟುಕೊಳ್ಳದೆ ಸೂಕ್ತ ವೈದ್ಯರಿಂದ ಚಿಕಿತ್ಸೆ ಪಡೆದುಕೊಳ್ಳಿ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸಲಹೆ ನೀಡಿದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ಜನ್ಮದಿನೋತ್ಸವ ಅಂಗವಾಗಿ ನಗರದ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಶಾಲಾ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣೆ ಹಾಗು ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ದೇಹ ಆರೋಗ್ಯವಾಗಿದ್ದರೆ ದೇಶ ಆರೋಗ್ಯವಾಗಿರುತ್ತೆ. ಆ ಕಾರಣಕ್ಕೆ ಈ ರೀತಿಯ ಆರೋಗ್ಯ ಶಿಬಿರಗಳನ್ನು ನಡೆಸಲಾಗುತ್ತಿದೆ. ಇತ್ತೀಚೆಗೆ ಕೆಲವರು ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಯಾದರೆ ಆಸ್ಪತ್ರೆಗೆ ಹೋಗಲು ಹಿಂಜರಿಯುತ್ತಾರೆ. ಆದರೆ, ಹೆಂಡದ ಅಂಗಡಿ ಕಡೆ ಹೋಗಬೇಕಾದರೆ ನಾಚಿಕೆಯಾಗುವುದಿಲ್ಲವೇ ಎಂದು ಕಟುವಾಗಿ ಪ್ರಶ್ನಿಸಿದರು.

ಇಂದು ಹೃದಯ ಸಮಸ್ಯೆ ಎಂದರೆ ದೊಡ್ಡ ಸಮಸ್ಯೆ ಎಂದುಕೊಂಡಿದ್ದಾರೆ. ಇದು ತಪ್ಪು ಕಲ್ಪನೆ. ಇಂದು ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಸುಲಭವಾಗಿ ಚಿಕಿತ್ಸೆ ನೀಡಬಹುದು. ದೊಡ್ಡ ದೊಡ್ಡ ಶಸ್ತ್ರ ಚಿಕಿತ್ಸೆಗಳು ಕೆಲವೇ ಗಂಟೆಗಳಲ್ಲಿ ಮುಗಿದು ಹೋಗುತ್ತವೆ. ಯಾರೂ ಭಯಪಡುವ ಅಗತ್ಯವಿಲ್ಲ. ಸರಳ ಕಾಯಿಲೆಯನ್ನು ದೊಡ್ಡ ಕಾಯಿಲೆ ಎಂದು ಭಾವಿಸಿದರೆ ಆರೋಗ್ಯವನ್ನು ಹಾಳು ಮಾಡಿಕೊಳ್ಳಬೇಕಾಗುತ್ತದೆ. ವೈದ್ಯರ ಸಲಹೆಯನ್ನು ಪಾಲಿಸಿದರೆ ನಮ್ಮ ಆರೋಗ್ಯ ನಮ್ಮ ಕೈಯಲ್ಲೇ ಇರುತ್ತದೆ ಎಂದರು.

**ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಗ್ರಾಮೀಣ ಭಾಗದ ಜನರಿಗೆ ಉಚಿತ ಆರೋಗ್ಯ ಸೇವೆ ನೀಡಬೇಕೆಂಬ ಉದ್ದೇಶದಿಂದ ಪ್ರಾರಂಭ ಮಾಡಿದ ಆರೋಗ್ಯ ಶಿಬಿರ ಇಂದು ಪೂಜ್ಯರ ಮಾರ್ಗದರ್ಶನದಲ್ಲಿ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಸೇವೆಯೇ ಪೂಜೆ ಎಂದು ಭಾವಿಸಿ ಆ ನಿಟ್ಟಿನಲ್ಲಿ ಈಗಿನ ನಿರ್ಮಲಾನಂದನಾಥ ಶ್ರೀಗಳು ನಡೆಯುತ್ತಿದ್ದಾರೆ.**
**-ಶ್ರೀ ಶಂಭುನಾಥ ಸ್ವಾಮೀಜಿ**

ಆರೋಗ್ಯ ತಪಾಸಣೆಯನ್ನು ರೋಗ ಬಂದಿರುವವರು ಮಾತ್ರ ಮಾಡಿಸಿಕೊಳ್ಳಬೇಕಾಗಿಲ್ಲ. ದೇಹವನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ಆಗಾಗ್ಗೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ದೇಹಕ್ಕೆ ಕಾಯಿಲೆ

» ನಾಲ್ಕನೇ ಪುಟದಲ್ಲಿ

# ಸರ್ಕಾರಿ ನೌಕರರು ಆರೋಗ್ಯ-ಕುಟುಂಬಕ್ಕೂ ಒತ್ತು ನೀಡಿ

## ಸಹೋದರತ್ವದ ಬಾಂಧವ್ಯ ಬೆಳೆಸಿಕೊಳ್ಳಲು ಶಾಸಕ ಹೆಚ್.ಪಿ.ಸ್ವರೂಪ್ ಸಲಹೆ

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ನೌಕರರು ಕೆಲಸದ ಜೊತೆಗೆ ಆರೋಗ್ಯ ಹಾಗು ಕುಟುಂಬದವರಿಗೂ ಹೆಚ್ಚು ಒತ್ತು ನೀಡಬೇಕೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿವಿಧ ಇಲಾಖೆಗಳ ಸರ್ಕಾರಿ ನೌಕರರು ಒಂದೇ ವೇದಿಕೆಯಲ್ಲಿ ಸೇರಿ ಕ್ರೀಡಾಕೂಟದಲ್ಲಿ ಭಾಗವಹಿಸಿರುವುದು ಸಂತೋಷದ ವಿಷಯ. ಇಂತಹ ಕ್ರೀಡಾಕೂಟಗಳು ಹೆಚ್ಚಾಗಿ ನಡೆದರೆ ಇಲಾಖೆಗಳ ನಡುವೆ ಸೌಹಾರ್ದತೆ ಹಾಗು ಬಾಂಧವ್ಯ ವೃದ್ಧಿಯಾಗಲು ಸಹಕಾರಿಯಾಗುತ್ತದೆ. ನೌಕರರ ಸಂಘದಲ್ಲಿ ಚುನಾವಣೆ ಮುಗಿದ ನಂತರ ಎಲ್ಲರೂ ಸಹೋದರತ್ವದ ಬಾಂಧವ್ಯದಿಂದ ಇರಬೇಕು. ಯಾವುದೇ ವೈಷಮ್ಯಗಳನ್ನು ಬೆಳೆಸಿಕೊಳ್ಳಬಾರದು. ಸಂಘಟನೆಯ ಅಭಿವೃದ್ಧಿಗೆ ನನ್ನ ಸಹಕಾರ ಸದಾ ಇರುತ್ತದೆ ಎಂದು ಭರವಸೆ ನೀಡಿದರು.



**ಸಂಘದ ಅಧಿಕಾರ ವಹಿಸಿಕೊಂಡ ಬಳಿಕ ನೌಕರರ ಹಿತ ರಕ್ಷಣೆಗೆ ಹಾಗು ಅವರ ಸುಖ- ದುಃಖಗಳಿಗೆ ಸ್ಪಂದಿಸುವ ಕಾರ್ಯವನ್ನು ಮಾಡಲಾಗಿದೆ. ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಲು ಎಲ್ಲರೂ ಉತ್ತಮ ಸಹಕಾರ ನೀಡಿದ್ದಾರೆ. ಗೆದ್ದ ಕ್ರೀಡಾಪಟುಗಳು ರಾಜ್ಯ ಹಾಗು ರಾಷ್ಟ್ರಮಟ್ಟಕ್ಕೆ ಭಾಗವಹಿಸಿದರೆ ಜಿಲ್ಲೆಯ ಕೀರ್ತಿ ಹೆಚ್ಚಾಗುತ್ತದೆ.**
**-ಬಿ.ಪಿ.ಕೃಷ್ಣೇಗೌಡ, ಜಿಲ್ಲಾಧ್ಯಕ್ಷ ಸರ್ಕಾರಿ ನೌಕರರ ಸಂಘ**

ಕಳೆದ ವರ್ಷ ಕ್ರೀಡಾಕೂಟದಲ್ಲಿ ಭಾಗವಹಿಸಲು 2500 ನೌಕರರು ನೋಂದಣಿ ಮಾಡಿಕೊಂಡಿದ್ದರು, ಆದರೆ, ಈ ಬಾರಿ 3500ಕ್ಕೂ ಹೆಚ್ಚು ನೌಕರರು ನೋಂದಣಿ ಮಾಡಿಕೊಂಡಿದ್ದಾರೆ. ನೌಕರರು ದಿನನಿತ್ಯ ಒತ್ತಡದಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಕೆಲಸದ ಒತ್ತಡ ಕಳೆಯಲು ಕ್ರೀಡಾಕೂಟ ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಕ್ರೀಡೆಯು ಪ್ರತಿಯೊಬ್ಬ ಮನುಷ್ಯ ಜೀವನದ

» ನಾಲ್ಕನೇ ಪುಟದಲ್ಲಿ

## ಜ.22 ರಿಂದ ವಿಶೇಷ ಅಧಿವೇಶನ

• ಪ್ರಜೋದಯ ವರದಿ

**ಬೆಂಗಳೂರು :** ಜನವರಿ 22 ರಿಂದ 31 ರವರೆಗೆ ಜಂಟಿ ಅಧಿ ವೇಶನ ನಡೆಯಲಿದ್ದು, ಮನರೇಗಾ ಯೋಜನೆ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ ಎಂದು ಸಿದ್ದರಾಮಯ್ಯ ಅವರು ತಿಳಿಸಿದರು.

## ಜನ ಸಂಪರ್ಕ ಸಭೆ

• ಪ್ರಜೋದಯ ವರದಿ

**ಹಾಸನ :** ಕರ್ನಾಟಕ ಲೋಕಾಯುಕ್ತ ವತಿಯಿಂದ ಜ.27 ರಂದು ಬೇಲೂರು ತಹಶೀಲ್ದಾರ್ ಕಚೇರಿ, ಜ.29 ರಂದು ಹಾಸನ ತಹಶೀಲ್ದಾರ್ ಕಚೇರಿ, ಜ.31 ಅರಸೀಕರೆ ತಹಶೀಲ್ದಾರ್ ಕಚೇರಿಯಲ್ಲಿ ಕರ್ನಾಟಕ ಲೋಕಾಯುಕ್ತದ ಪೊಲೀಸ್ ಉಪಾಧೀಕ್ಷಕರ ಸಕ್ಷಮದಲ್ಲಿ ಜನಸಂಪರ್ಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಆಯಾಯ ತಾಲ್ಲೂಕು ಮಟ್ಟದ ಸಾರ್ವಜನಿಕರು ತಮ್ಮ ಕುಂದು ಕೊರತೆಗಳಿಗೆ ಸಂಬಂಧಿಸಿದ ದಾಖಲಾತಿಗಳೊಂದಿಗೆ ಹಾಜರಾಗಿ ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು

# ಕಲ್ಲೋಡೆಬೋರೆ ಕಾವಲಿನಲ್ಲಿ ಗಣಿಗಾರಿಕೆ ಅನುಮತಿಗೆ ವಿರೋಧ

## ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ಕಚೇರಿ ಎದುರು ಗ್ರಾಮಸ್ಥರ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ತಾಲ್ಲೂಕಿನ ಹಳ್ಳಿ ಮೈಸೂರು ಹೋಬಳಿ ಕಲ್ಲೋಡೆಬೋರೆ ಕಾವಲು ಸರ್ಕಾರಿ ಜಾಗದಲ್ಲಿ ಕಾನೂನು ಉಲ್ಲಂಘಿಸಿ ನಾಲ್ವರಿಗೆ ಕಲ್ಲು ಗಣಿಗಾರಿಕೆಗೆ ಪರವಾನಗಿ ನೀಡಿರುವುದನ್ನು ಖಂಡಿಸಿ ಗ್ರಾಮಸ್ಥರು ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು.

ನಗರ ಹೊರವಲಯದ ಸತ್ಯಮಂಗಲ ಬಡಾವಣೆಯಲ್ಲಿರುವ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಚೇರಿಗೆ ಆಗಮಿಸಿದ ಗ್ರಾಮಸ್ಥರು, ಅಧಿಕಾರಿಗಳು ಹಣದ ಪ್ರಭಾ



ವಕ್ಕೆ ಒಳಗಾಗಿ ಪರವಾನಗಿಗಳನ್ನು ನೀಡುತ್ತಿದ್ದಾರೆ. ಇದರಿಂದ ಪರಿಸರಕ್ಕೆ ಹಾನಿ ಆಗಲಿದ್ದು, ಜನರಲ್ಲಿ ವಿವಿಧ ರೋಗಗಳು ಹರಡುತ್ತಿವೆ. ತಕ್ಷಣ ಈ ಪರವಾನಗಿಗಳನ್ನು ರದ್ದುಪಡಿಸಬೇಕೆಂದು ಆಗ್ರಹಿಸಿದರು.

ಕಲ್ಲೋಡೆಬೋರೆ ಕಾವಲಿನಲ್ಲಿ ಸುಮಾರು 657 ಎಕರೆ ಸರ್ಕಾರಿ ಜಾಗವಿದ್ದು, ಕೆಲವು ರೈತರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಆದರೆ, ಕಂದಾಯ ಇಲಾಖೆ

» ನಾಲ್ಕನೇ ಪುಟದಲ್ಲಿ

## ಭೀಮಾ ಕೋರೆಗಾಂವ್ ವಿಜಯೋತ್ಸವದಲ್ಲಿ ಅಂಬೇಡ್ಕರ್ ಮೊಮ್ಮಗ ಭೀಮ್‌ರಾವ್ ಅಂಬೇಡ್ಕರ್ ಕಳವಳ

# ಸರ್ಕಾರದ ನೀತಿಯಿಂದ ಸಂವಿಧಾನಾತ್ಮಕ ಹಕ್ಕು ದುರ್ಬಲ

• ಪ್ರಜೋದಯ ವರದಿ

**ಹಾಸನ:** ಅಂದಿನ ಕಾಲಕ್ಕೆ ಶೋಷಣೆ ವಿರುದ್ಧ ಭೀಮಾ ಕೋರೆಗಾಂವ್ ಸಮಾನತೆಗಾಗಿ ನಡೆದ ಹೋರಾಟವಾದರೆ, ಇಂದಿಗೂ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಯುತ್ತಲೇ ಇದೆ. ತಳ ಸಮುದಾಯದ ಮೇಲಿನ ದೌರ್ಜನ್ಯ ದಬ್ಬಾಳಿಕೆ ಕೊನೆಗಾಣಿಸಲು ಸಂವಿಧಾನದ ಕಾನೂನುಗಳ ಕಟ್ಟುನಿಟ್ಟಿನ ಜಾರಿಯಿಂದ ಮಾತ್ರ ಸಾಧ್ಯವೆಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಮೊಮ್ಮಗ ಭೀಮ್‌ರಾವ್ ಅಂಬೇಡ್ಕರ್ ಅವರು ಹೇಳಿದರು.

ನಗರದ ಪ್ರಜಾಸೌಧದ ಬಳಿ ಮಂಗಳವಾರ ಹಮ್ಮಿಕೊಂಡಿದ್ದ 208ನೇ ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಗಳಿಂದಾಗಿ ಸಂವಿಧಾನಾತ್ಮಕ ಹಕ್ಕುಗಳು ದುರ್ಬಲಗೊಳ್ಳುತ್ತಿವೆ. ಮೀಸಲಾತಿ ನೀತಿಯ ಸರಿಯಾದ ಅನುಷ್ಠಾನವಾಗುತ್ತಿಲ್ಲವೆಂದು ಅಸಮಾ



ಧಾನ ವ್ಯಕ್ತಪಡಿಸಿದರು.

ಸರ್ಕಾರಿ ಸಂಸ್ಥೆಗಳ ಖಾಸಗೀಕರಣದಿಂದ ಉದ್ಯೋಗಾವಕಾಶಗಳು ಕಡಿಮೆಯಾಗಿವೆ. ಪದೋನ್ನತಿಯಲ್ಲಿ ಮೀಸಲಾತಿ ಕುರಿತು ಅನೇಕ ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿವೆ. ಸರ್ಕಾರಿ ಸಂಸ್ಥೆಗಳೇ ಇಲ್ಲವೆನ್ನುವ ವಾದಗಳು ಮುಂದಿಡಲಾಗುತ್ತಿವೆ. ಇದು ದೇಶದ ಶೋಷಿತ ಸಮುದಾಯಗಳಿಗೆ ದೊಡ್ಡ ಆತಂಕವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಭೀಮಾ ಕೋರೆಗಾಂವ್ ವಿಜಯೋತ್ಸವವನ್ನು ನಾವು ಕೇವಲ ಆಚರಣೆಗಾಗಿ ಅಲ್ಲ, ಆತ್ಮ ಗೌರವದ ಸಂಕೇತವಾಗಿ ಆಚರಿಸಬೇಕು. ಈ ಇತಿಹಾಸ ದೇಶಾದ್ಯಂತ ಹಾಗು ವಿದೇಶಗಳಲ್ಲೂ ಚರ್ಚೆಗೆ ಬಂದಿದೆ. ಕರ್ನಾಟಕ ಸೇರಿ ಅನೇಕ ರಾಜ್ಯಗಳಲ್ಲಿ ಈಗ ಜನರಿಗೆ ಈ ಇತಿಹಾಸ ತಿಳಿಯತೊಡಗಿದೆ. ಇದು ನಮ್ಮ ಸಮುದಾಯದ ಇತಿಹಾಸ ಮಾತ್ರವಲ್ಲ, ಸಮಾನತೆ, ನ್ಯಾಯ ಮತ್ತು ಮಾನವೀಯ ಗೌರವಕ್ಕಾಗಿ ನಡೆದ ಹೋರಾಟದ ಇತಿಹಾಸ. ಈ ಸತ್ಯವನ್ನು ಮುಂದಿನ ತಲೆಮಾರಿಗೆ ತಲುಪಿಸುವ ಜವಾಬ್ದಾರಿ ನಮ್ಮದಾಗಿದೆ ಎಂದು ತಿಳಿಸಿದರು.

**ಅಂಬೇಡ್ಕರ್ ಅವರ ಮೊಮ್ಮಗ ಹಾಸನಕ್ಕೆ ಪದಾರ್ಪಣೆ ಮಾಡಿರುವುದು ಹೆಮ್ಮೆಯ ವಿಚಾರ. ಜಾತಿ ವಿರುದ್ಧ ಹಾಗು ಸಮಾನತೆಗಾಗಿ ಅಂಬೇಡ್ಕರ್‌ರವರ ಹೋರಾಟದ ಫಲ ಎಲ್ಲರಿಗೂ ಲಭಿಸಿದೆ. ಅಂತಹವರ ಮೊಮ್ಮಗನ ಜೊತೆಗೆ ವೇದಿಕೆ ಹಂಚಿಕೊಳ್ಳುವ ಅವಕಾಶ ಸಿಕ್ಕಿದ್ದು ಸಂತೋಷದ ವಿಚಾರ.**
**- ಶ್ರೇಯಸ್ ಪಟೇಲ್, ಸಂಸದ**


ಭೀಮಾ ಕೋರೆಗಾಂವ್ ಯುದ್ಧವು ಕೇವಲ ಒಂದು ಸೈನಿಕ ಸಂಘರ್ಷವಲ್ಲ, ಅದು ಗೌರವ, ಸ್ವಾಭಿಮಾನ ಮತ್ತು ಸಮಾನತೆಯ ಹೋರಾಟದ ಸಂಕೇತ. 1818ರಲ್ಲಿ ಭೀಮಾ ನದಿಯ ತಟದಲ್ಲಿ ನಡೆದ ಈ ಯುದ್ಧದಲ್ಲಿ ಮಹಾರ್ ಸಮುದಾಯದ ಸೈನಿಕರು ಬ್ರಿಟೀಷ್ ಸೇನೆಯ ಭಾಗವಾಗಿ ಪೇಶ್ವೆಗಳ ಆಳ್ವಿಕೆಗೆ ವಿರುದ್ಧವಾಗಿ

» ನಾಲ್ಕನೇ ಪುಟದಲ್ಲಿ



ಶ್ರೀ ಬಿ.ಕೆ ರಂಗಸ್ವಾಮಿರವರ
2ನೇ ವರ್ಷದ ಪುಣ್ಯಸ್ಮರಣೆ
ಜನನ : 07-10-1949 ಮರಣ : 21-01-2024
ತಮ್ಮ ವಿಶ್ವಾಸಿಗಳು:
ಶ್ರೀಮತಿ ಯಶೋದ ರಂಗಸ್ವಾಮಿ
ಮತ್ತು ಕುಟುಂಬವರ್ಗದವರು
ಶ್ರೀ ಅರವಿಂದ ವಿದ್ಯಾ ಸಂಸ್ಥೆ, ಹಾಸನ
Since : 1979

# ಮಾವಿನಲ್ಲಿ ಹುಳಗಳ ನಿಯಂತ್ರಣ ಸಾಧ್ಯವೇ?



**ಮಾ**ವಿನ ಮರದಲ್ಲಿ ಕಾಯಿಗಳು ಬೆಳೆಯುತ್ತಿವೆ. ಕೆಲವೆಡೆ ಸ್ವಲ್ಪ ಕೊಯ್ಲು ಪ್ರಾರಂಭವಾಗಿದೆ. ಮಳೆ ಬರುವುದಕ್ಕೆ ಮುಂಚೆ ಹಣ್ಣಾಗುವ ಮಾವಿನ ಕಾಯಿಗೆ ಹಣ್ಣು ನೊಣ ಉಪಟಳ ಕಡಿಮೆ. ಒಂದು ಮಳೆ ಬಂದರೆ ಸಾಕು ಮಾವಿನ ಹಣ್ಣನ್ನು ಕತ್ತರಿಸಿ ನೋಡದೆ ಬಳಕೆ ಮಾಡುವುದು ಸಾಧ್ಯವೇ ಇಲ್ಲ. ನೋಡಲು ಸರಿಯಾಗಿದ್ದರೂ ಒಳಗೆ ಹುಳ ಇರಬಹುದು. ಹುಳ ಇಲ್ಲವಾದರೆ ಒಳಗೆ ರಸ ಕದಡಿರಬಹುದು. ಮಾವಿನ ಹಣ್ಣಿನಲ್ಲಿ ಹುಳ ಬರುವುದಿಲ್ಲ ಎಂದಾದರೆ ಎಷ್ಟು ಖುಷಿ ಪಟ್ಟು ತಿನ್ನಬಹುದು. ಆದರೆ ಹುಳ ಇರದ ಮಾವು ಹುಡುಕುವುದೇ ಕಷ್ಟ.

ಮಾವಿನ ಮರದಲ್ಲಿ ಕಾಯಿಗಳು ಲಿಂಬೆ ಗಾತದಷ್ಟು ಬೆಳೆಯುವಾಗ ಈ ಹುಳ ಪ್ರತ್ಯಕ್ಷ ವಾಗುತ್ತದೆ. ಈ ಹಂತದಿಂದಲೇ ಪ್ರಾರಂಭಿಸಿ ಹಣ್ಣು ನೊಣ ಬಾರದಂತೆ ಮಾಡಿದರೆ ಸ್ವಲ್ಪ ಮಟ್ಟಿಗೆ ಯಾದರೂ ಉತ್ತಮ ಹಣ್ಣನ್ನು ಉಳಿಸಬಹುದು. ಮಾವಿನ ಹಣ್ಣಿನಲ್ಲಿ ಒಂದೇ ಅಲ್ಲ ಎಲ್ಲಾ ನಮೂನೆಯ ಹಣ್ಣಿಗೂ ಬೆಳೆದು ತಿನ್ನುವ ಸಮಯಕ್ಕಾಗುವಾಗ ಹುಳ ಬೆಳೆದು ಹೊರಬರುವುದು ಅತೀ ದೊಡ್ಡ ಸಮಸ್ಯೆ. ಒಂದು ಜಾತಿಯ ನೊಣ ಮಾವು ಕಾಯಿ ಹಂತದಲ್ಲಿದ್ದಾಗ ಅದರ ಸಿಪ್ಪೆಯ ಮೇಲೆ ಚುಚ್ಚಿ ಮೊಟ್ಟೆ ಇಡುತ್ತದೆ. ಹಣ್ಣು ಪಕ್ವವಾಗುವಾಗ ಹಣ್ಣಿನೊಳಗೆಲ್ಲಾ ಹುಳವಿ ರುತ್ತದೆ. ಮಾವು ಬೆಳೆಯಲಾಗುವ ಎಲ್ಲಾ ಕಡೆ ಹಣ್ಣು ನೊಣ ಇದೆ. ಹಣ್ಣು ಇರುವಲ್ಲೆಲ್ಲಾ ಹಣ್ಣು ನೊಣ ಇದೆ ಎನ್ನಬಹುದು. ಮಾವು, ಪೇರಳೆ, ಮೂಸಂಬಿ, ಕಿತ್ತಳೆ, ಕರಬೂಜ, ಎಲ್ಲಾ ನಮೂ ನೆಯ ಹಣ್ಣಿನ ಬೆಳೆಗಳಿಗೂ ಹಣ್ಣು ನೊಣ ಅತೀ ದೊಡ್ಡ ಶತ್ರು. ಮಾರಾಟ, ದಾಸ್ತಾನು, ರಫ್ತು ಪ್ರತಿಯೊಂದರಲ್ಲಿ ಮಾವಿಗೆ ಕೆಟ್ಟ ಹೆಸರು ತಂದ ಕೀಟ ಇದು. ಅದೇ ರೀತಿಯಲ್ಲಿ ತರಕಾರಿ ಬೆಳೆಗಳಲ್ಲೂ ಹಣ್ಣು ನೊಣ ಅತೀ ದೊಡ್ಡ ಶತ್ರು.

ಈ ನೊಣಗಳು ಜೇನು ನೊಣವನ್ನು ಹೋಲುವಂತವುಗಳಾಗಿದ್ದು, ಸಾಮಾನ್ಯವಾಗಿ ತುಳಸಿ ಗಿಡವು ಹೂವು ಬಿಡುವಾಗ ಅದರ ಪುಷ್ಪದ ಸುತ್ತ ಹಾರಾಡುತ್ತಿರುವುದನ್ನು ಗಮನಿಸಬಹುದು. ತುಳಸಿ ಗಿಡದ ಸುವಾಸನೆ ಅದನ್ನು ಅತಿಯಾಗಿ ಆಕರ್ಷಿಸುತ್ತದೆ. ಇವುಗಳ ಹತೋಟಿಗೆ ಕೀಟ ನಾಶಕದ ಬಳಕೆ ಬೇಕೋ ಬೇಡವೋ ಎಂದು ನಿರ್ಧರಿಸಲು ಮೋಹಕ ಬಲೆಗಳು ಸಹಕಾರಿ. ಮೋಹಕ ಬಲೆಗಳೆಂದರೆ ಹಣ್ಣು ನೊಣದ ಟ್ರಾಪುಗಳು. ಅದನ್ನು ಮಾವಿನ ಮಿಡಿ ಕಚ್ಚುವ ಸಮಯದಲ್ಲಿ ಮರದ ಗೆಲ್ಲಿನಲ್ಲಿ ನೆಲಮಟ್ಟದಿಂದ 4–5 ಅಡಿ ಎತ್ತರಕ್ಕಿರುವಂತೆ ನೆರಳಿನ ಜಾಗದಲ್ಲಿ ನೇತು ಹಾಕಬೇಕು. ಅದರಲ್ಲಿ ಮಿಥೇಲ್ ಯುಜೆನಾಲ್ ಎಂಬ ರಾಸಾಯನಿಕ ಇದ್ದು, ಇದು ಹಣ್ಣು ನೊಣದ ಗಂಡು ದುಂಬಿಗೆ ಹೆಣ್ಣಿನ ವಾಸನೆಯನ್ನು ಸೂಸುತ್ತದೆ. ಅದಕ್ಕೆ ಆಕರ್ಷಿತ ವಾಗಿ ಗಂಡು ನೊಣಗಳು ಬರುತ್ತವೆ. ಅಲ್ಲಿ ಸುತ್ತುತ್ತಾ ತಲೆ ತಿರುಗಿ ಬೀಳುತ್ತವೆ. ಅದನ್ನು ಕಾಯಿಗಳು ನಿಂಬೆ ಕಾಯಿಯ ಗಾತ್ರದಲ್ಲಿರುವಾಗ ಇಟ್ಟರೆ ಗಂಡು ಇಲ್ಲದೆ ಹೆಣ್ಣೂ ಸಂತಾನಾಭಿ ವೃದ್ಧಿಗೆ ಅನನುಕೂಲವಾಗಿ ಮೊಟ್ಟೆ ಇಡುವಿಕೆ ಕಡಿಮೆಯಾಗುತ್ತದೆ. ಟ್ರಾಪನ್ನು ನೇತಾಡಿಸಿದಾಗ ಬೀಳುವ ನೊಣಗಳ ಸಂಖ್ಯೆಯನ್ನು ಗಮನಿಸಿ ಮೊದಲ ಹಂತದಲ್ಲಿ (ಕಾಯಿ ಬೆಳವಣಿಗೆಗೆ 1 ತಿಂಗಳ ಮುಂಚೆ) ಕೀಟನಾಶಕ ಸಿಂಪಡಿಸಿ ಒಂದಷ್ಟು ನೊಣಗಳನ್ನು ನಾಶಮಾಡಬಹುದು. ಒಂದು ಟ್ರಾಪಿನಲ್ಲಿ ದಿನಕ್ಕೆ 6ಕ್ಕಿಂತ ಹೆಚ್ಚು ನೊಣಗಳು ಬಿದ್ದರೆ ಅದರ ಸಂಖ್ಯೆ ಹೆಚ್ಚು ಇದೆ ಎಂದರ್ಥ. ಅದನ್ನು ಟ್ರಾಪಿನೊಂದಿಗೆ ಕೀಟನಾಶಕದ ಬಳಕೆ ಮಾಡಿ ನಿಯಂತ್ರಣ ಮಾಡ ಬೇಕಾಗುತ್ತದೆ.

ಹಣ್ಣು ನೊಣಗಳು ಎಲ್ಲಿಂದ ಬರುತ್ತವೆ

ಮಾವಿನ ಸಸಿ ನೆಟ್ಟ ಮೊದಲ ವರ್ಷ ಹಣ್ಣು ನೊಣದ ತೊಂದರೆ ಬಹಳ ಕಡಿಮೆ. ನಂತರದ ವರ್ಷ ಅದು ಪ್ರಾರಂಭವಾಗುತ್ತದೆ. ಹೀಗಾದರೆ ಮಾವಿನ ಮರದಲ್ಲಿ ಬಿಡುವ ಎಲ್ಲಾ ಹಣ್ಣು ಗಳೂ ಉಳಿಯುವುದಿಲ್ಲ. ಕೆಲವು ಅಪಕ್ವ ಸ್ಥಿತಿಯಲ್ಲಿ ಉದುರುತ್ತವೆ. ಅದನ್ನು ಯಾಕಾಗಿ ಹೆಕ್ಕು ವುದು, ಹಾಳು ಮಾವಿನಿಂದ ನಮಗೇನು ಪ್ರಯೋಜನ ಎಂದು ಅದನ್ನು ಅಲ್ಲೇ ಬಿಡುತ್ತೇವೆ. ಅದರ ಮೂಲಕ ಹಣ್ಣು ನೊಣ ಸಂತಾನಭಿವೃದ್ಧಿಯಾಗುತ್ತದೆ. ಅವು ಹಾರುವ ಕೀಟಗಳಾಗಿದ್ದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರಿ ಬರುತ್ತವೆ. ಆಹಾರ ಇದ್ದರೆ ಅಲ್ಲಿ ಮೊಟ್ಟೆ ಇಡುತ್ತವೆ. ಇಲ್ಲವಾದರೆ ನಾಶವಾಗುತ್ತದೆ. ಬಿದ್ದ ಕಾಯಿಗಳ ಮೂಲಕ ಸಂತಾನಾಭಿವೃದ್ಧಿಯಾಗಿ ಅದು ನೆಲದಲ್ಲಿ, ಮರದ ಎಡೆ ಸಂದುಗಳಲ್ಲಿ ವಾಸ್ತವ್ಯವಿರುತ್ತದೆ. ಮತ್ತೆ ಮಾವಿನ ಹಣ್ಣಿನ ಸೀಸನ್‌ನಲ್ಲಿ ಕಾಯಿಯ ಮೇಲೆ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ. ಆದ ಕಾರಣ ಮೂಲದಲ್ಲೇ ಹಣ್ಣು ನೊಣದ ಸಂತತಿಯನ್ನು ಹತ್ತಿಕ್ಕಲು ಮಾವು ಬೆಳೆಸುವವರು ಬುಡದಲ್ಲಿ ಬೀಳುವ ಯಾವುದೇ ಕಾಯಿಗಳನ್ನು ಅಲ್ಲೇ ಕೊಳೆಯಲು ಬಿಡಬಾರದು. ಅದನ್ನು ಸುಡಬೇಕು, ಇಲ್ಲವೇ ಆಳದಲ್ಲಿ ಹುಗಿಯಬೇಕು. ಇಲ್ಲವೇ ಬಿದ್ದ ಕಾಯಿಗಳನ್ನು ಕೀಟನಾಶಕ ದ್ರಾವಣದಲ್ಲಿ ಹಾಕಬೇಕು.

ಹಣ್ಣು ನೊಣವು ಕಾಯಿಗಳ ಮೇಲೆ ಕುಳಿತು ತನ್ನ ಶರೀರದ ಭಾಗದ ಕೊಂಡಿಯ ಮೂಲಕ ಚುಚ್ಚಿ ಮೊಟ್ಟೆ ಇಡುತ್ತದೆ. ಮೊಟ್ಟೆಗಳು ಅದರೊಳಗೆ ಬೆಳೆಯುತ್ತಾ ಸುಮಾರು 50–60 ದಿನ ಗಳಲ್ಲಿ ಹುಳುಗಳಾಗುತ್ತವೆ. ಸೂಕ್ಷ್ಮವಾಗಿ ಗಮನಿಸಿದರೆ ಮಾವಿನ ಕಾಯಿಯ ಸಿಪ್ಪೆಯ ಮೇಲ್ಮೈಯಲ್ಲಿ ಸಣ್ಣ ಚುಚ್ಚಿದ ಗಾಯ ಕಪ್ಪು ಬಣ್ಣದಲ್ಲಿ ಕಾಣಿಸುತ್ತದೆ. ಮಾವಿನ ಬೆಳೆ ಇರುವಲ್ಲಿ ಅಥವಾ ಇತರ ಕಿತ್ತಳೆ, ಮೂಸಂಬಿ, ಕಲ್ಲಂಗಡಿ, ತರಕಾರಿ ಬೆಳೆಯುತ್ತಿರುವ ಜಾಗದಲ್ಲಿ ಮನೆ ನೊಣದ ತರಹದ ಕೀಟವೊಂದು ಹಾರಾಡುತ್ತಿರುವುದು, ಕಾಯಿಗಳ ಮೇಲೆ ಕುಳಿತಿರುವುದನ್ನು ಗಮನಿಸಬಹುದು. ಹುಳ ಭಾಧಿತವಾದುದು ಉದುರಿ ಬಿದ್ದರೆ ಅದರಲ್ಲಿದ್ದ ಹಣ್ಣಿನ ಹುಳುಗಳು ಹೊರಬಂದು ಮಣ್ಣಿಗೆ ಸೇರಿ ಕೋಶಾವಸ್ಥೆಯನ್ನು ತಲುಪುತ್ತದೆ. ಕೆಲವೇ ದಿನಗಳಲ್ಲಿ ಕೋಶಾವಸ್ಥೆ ಯಿಂದ ಪ್ರೌಢಾವಸ್ಥೆಗೆ ಬಂದ ನೊಣಗಳು ಮತ್ತೆ ಮೊಟ್ಟೆ ಇಟ್ಟು ಅಲ್ಲಿ ಸಂತಾನಾಭಿವೃದ್ಧಿಗೊಳ್ಳುತ್ತವೆ. ಹುಳ ಚಿಕ್ಕದಾದರೂ ಅದು ನೆಲಕ್ಕೆ ಬಿದ್ದಾಗ ಎರಡೂ ಮಗ್ಗುಲನ್ನೂ ನೆಲಕ್ಕೆ ಒತ್ತಿ ಸುಮಾರು 1 ಮೀ ಜಿಗಿಯುತ್ತದೆ.

ಮೋಹಕ ಬಲೆಗಳನ್ನು ಒಂದು ಎಕ್ರೆಗೆ 2 ರಿಂದ 10 ಸಂಖ್ಯೆಯಲ್ಲಿ ಕಟ್ಟಬೇಕು. ನೀರಿನ ಪ್ಲಾಸ್ಟಿಕ್ ಬಾಟಲಿಯನ್ನು (ಚಿತ್ರದಲ್ಲಿ 2ರಲ್ಲಿ ತೋರಿಸಿದಂತೆ) ಎರಡೂ ಕಡೆ ತೆರೆದು ಮಿಥೇಲ್ ಯುಜಿನಾಲ್ ದ್ರವ ಹಾಕಿದ ಕಾರ್ಡ್ ಬೋರ್ಡ್ ತುಂಡನ್ನು ಬಾಟಲಿಯ ಮುಚ್ಚಳಕ್ಕೆ ಹಗ್ಗ ದಿಂದ ಸುರಿದು ಬಾಟಲಿಯ ಒಳಭಾಗದೊಳಗೆ ನೇತಾಡಿಸಬೇಕು. ಕೆಲವು ತಯಾರಿಕೆಗಳಲ್ಲಿ ನೇತಾಡಿಸುವ ಕಂಟೈನರ್ ಸಹ ದೊರೆಯುತ್ತದೆ. ಕಟ್ಟುವಾಗ ಭೂಮಿಯಿಂದ 3 ರಿಂದ 6 ಅಡಿ ಎತ್ತರದಲ್ಲಿ, ಗಾಳಿಗೆ ಅಲುಗಾಡದಂತೆ ಹಾಗೂ ನೇರವಾಗಿ ಬಿಸಿಲು ಬೀಳದ ಕಡೆ ಎಲೆಗಳ ಮರೆ ಯಲ್ಲಿ ಕಟ್ಟಬೇಕು. ಮೋಹಕ ಬಲೆಗಳನ್ನು ಹಣ್ಣುಗಳೆಲ್ಲಾ ಮುಗಿಯುವವರೆಗೂ ಉಳಿಸಬೇಕು. ಒಂದು ಹಣ್ಣು ನೊಣಕ್ಕೆ ಆಹಾರವಾಗಿ ಕೊಳೆತು ಕೆಳಕ್ಕೆ ಬಿದ್ದರೂ ಸಹ ಅದು ಮುಂದಿನ ವರ್ಷಕ್ಕೆ ನೆಲದಲ್ಲಿ ಸುಪ್ತಾವಸ್ಥೆಯಲ್ಲಿ ಇರುತ್ತದೆ. ಪ್ರತಿ ವಾರ ನೊಣಗಳ ಬೀಳುವಿಕೆಯನ್ನು ಗಮನಿಸುತ್ತಿರ ಬೇಕು. ದಿನಕ್ಕೆ ಒಂದು ಬಲೆಯಲ್ಲಿ ಐದಕ್ಕಿಂತ ಹೆಚ್ಚು ನೊಣಗಳು ಬಿದ್ದಲ್ಲಿ ಬಲೆಯ ಸಂಖ್ಯೆ ಯನ್ನು ಹೆಚ್ಚಿಸಬೇಕು. ಕನಿಷ್ಟ ವಾರಕ್ಕೊಮ್ಮೆಯಾದರೂ ಬಲೆಯ ಸಂಗ್ರಾಹಕದಲ್ಲಿ ಬಿದ್ದ ನೊಣಗಳನ್ನು ತೆಗೆದು ಸ್ವಚ್ಛಗೊಳಿಸುತ್ತಿರಬೇಕು. ಪಾತ್ರೆಯೊಳಗೆ ನೀರು ಸೇರಿಕೊಂಡರೆ ಅದನ್ನು ತೆಗೆಯಬೇಕು. ಮೋಹಕ ಬಲೆಗಳು ಮಾರುಕಟ್ಟೆಯಲ್ಲಿಯೂ ದೊರೆಯುತ್ತದೆ. ಬೆಂಗಳೂರಿನಲ್ಲಿ ರುವ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ ಸಹ ಲಭ್ಯವಿದೆ.

ರಾಸಾಯನಿಕವಾಗಿ ಹತೋಟಿ ಮಾಡಲು ಹೂವು ಬಿಡುವ ಸಮಯದಲ್ಲಿ ಮರದ ಬುಡ ಭಾಗವನ್ನು ಉಳುಮೆ ಮಾಡಿ ತೆಳುವಾಗಿ ನೀರು ಸಿಂಪರಣೆ ಮಾಡಿ ಮರದ ಗೆಲ್ಲು ವ್ಯಾಪಿಸಿರುವಷ್ಟು ಭಾಗಕ್ಕೆ ಕ್ಲೋರೋಫೆರಿಫೋಸ್ ಅಥವಾ ಮೆಲಾಥಿಯಾನ್ ಕೀಟನಾಶಕವನ್ನು (3–5 ಮಿಲಿ) ಸಿಂಪಡಿದರೆ ಬುಡ, ನೆಲ ಭಾಗದಲ್ಲಿ ಅಡಗಿರುವ ಹುಳದ ಕೋಶಗಳು ಸಾಯು ತ್ತವೆ. ಜನವರಿ–ಫೆಬ್ರವರಿ ತಿಂಗಳಲ್ಲಿ ಶೇ.1 ಬೇವಿನ ಬೀಜದ ಕಷಾಯವನ್ನು ಸಿಂಪರಣೆ ಮಾಡು ವುದರಿಂದ ಬಹಳಷ್ಟು ಕೀಟಗಳು ಸಾಯುತ್ತವೆ. ಮನೆ ಬಳಕೆಗಾಗಿ ಸಣ್ಣ ಪ್ರಮಾಣದಲ್ಲಿ ಮಾವು ಬೆಳೆಸಿದವರು ಕೈಗೆ ಎಟಕುವ ಮಾವಿನ ಕಾಯಿಗಳಿಗೆ ಪ್ಲಾಸ್ಟಿಕ್ ಇಲ್ಲವೇ ನ್ಯೂಸ್ ಪೇಪರಿನ ಕವರ್ ಮಾಡಿ ಕಾಯಿಗಳನ್ನು ಮುಚ್ಚುವಂತೆ ಮಾಡಿದರೆ 100 ಕ್ಕೆ 100 ಹಣ್ಣು ನೊಣ ತೊಂದರೆ ಇಲ್ಲ. ಅದನ್ನು ಅಂಜಿಕೆ ಇಲ್ಲದೇ ಕಚ್ಚಿ ತಿನ್ನಬಹುದು. ಹಣ್ಣು ನೊಣ ನಿಯಂತ್ರಣ ಬಗ್ಗೆ ಇನ್ನಷ್ಟು ಸಂಶೋಧನೆಗಳಾಗ ಬೇಕಿದೆ. ಮಾವಿನ ಮರದ ಸುತ್ತಲೂ ತುಳಸಿ ಗಿಡ ಬೆಳೆಸಿ ಅದಕ್ಕೆ ಬರುವ ನೊಣಗಳ ಮೇಲೆ ಕೀಟನಾಶಕ ಸಿಂಪಡಿಸಿ ಬಹಳಷ್ಟು ಹಣ್ಣು ನೊಣಗಳನ್ನು ಕೊಲ್ಲಬಹುದು.

**- ರಾಧಾಕೃಷ್ಣ ಹೊಳ್ಳ**


# ತಾರ್ಕಿಕ ಅಂತ್ಯ ಕಾಣಲಿ



**ಸ**ರ್ಕಾರದ ವಿವಿಧ ಇಲಾಖೆಗಳು ಮತ್ತು ಯೋಜನೆಗಳ ಬಗ್ಗೆ ಆಗೀಗ ಆರೋಪಗಳು ಕೇಳಿ ಬರುವುದು ಎಲ್ಲಾ ಕಾಲದಲ್ಲೂ ಇದ್ದಿದ್ದೇ, ವಿರೋಧ ಪಕ್ಷಗಳು ಅಥವಾ ಮಾಹಿತಿ ಹಕ್ಕು ಕಾರ್ಯ ಕರ್ತರು... ಹೀಗೆ ಬೇರೆ ಬೇರೆ ಕಡೆಗಳಿಂದ ಇಂಥಹ ಅಂಶ ಹೊರಬೀಳಬಹುದು, ಈ ರೀತಿಯ ಆರೋಪ ಕೇಳಿಬಂದಾಗ, ವಿಳಂಬಕ್ಕೆ ಅಸ್ಪದ ನೀಡದೆ ಸೂಕ್ತ ತನಿಖೆ ನಡೆಸಿ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುವ ಕೆಲಸವನ್ನು ಆಡಳಿತದಲ್ಲಿರುವವರು ಮಾಡಬೇಕಾಗುತ್ತದೆ. ಅದರಿಂದ ಸಾರ್ವಜನಿಕ ವಲಯದಲ್ಲಿ ಉಂಟಾದ ಅನುಮಾನ ದೂರಾಗುವುದಲ್ಲದೆ, ಆರೋಪಿ ಗಳ ಕೃತ್ಯ ಸಾಬೀತಾದರೆ ಅವರ ಮೇಲೆ ಕ್ರಮವಾಗಲು ಅಥವಾ ಆರೋಪದಲ್ಲಿ ಸತ್ಯವಿಲ್ಲ ಎಂದಾದಲ್ಲಿ ಆರೋಪ ಮುಕ್ತ ರಾಗಲು ಅನುವಾಗುತ್ತದೆ. ಕೇಂದ್ರ ಸರ್ಕಾರವು ಮನರೇಗಾ ಯೋಜನೆಯ ಹೆಸರನ್ನು ವಿಬಿ ರಾಮ್ ಜಿ ಎಂದು ಬದಲಿಸಿರುವುದು ಹಾಗೂ ಯೋಜನೆಯ ಸ್ವರೂಪದಲ್ಲಿ ಕೆಲ ಮಾರ್ಪಾಡು ಮಾಡಿರುವುದನ್ನು ಬಿಜೆಪಿಯೇತರ ರಾಜ್ಯ ಸರ್ಕಾರಗಳು ಬಲವಾಗಿ ವಿರೋಧಿಸುತ್ತಿವೆ. ಕಾಂಗ್ರೆಸ್ ಪಕ್ಷ ವಂತೂ ಈ ಬಗ್ಗೆ ದೇಶವ್ಯಾಪಿ ದೊಡ್ಡ ಜನಾಂದೋಲ ನವನ್ನೇ ನಡೆಸಲು ಸಜ್ಜಾಗಿದೆ. ರಾಜ್ಯದಲ್ಲಿ 2019ರಿಂದ 2025ರ ಆರು ವರ್ಷಗಳಲ್ಲಿ ಸುಮಾರು 669 ಕೋಟಿ ರೂ. ಮೊತ್ತದ ಅಕ್ರಮ ಈ ಯೋಜನೆಯಲ್ಲಿ ನಡೆದಿದೆಯೆಂಬುದು ಸಾಮಾಜಿಕ ಲೆಕ್ಕ ಪರಿಶೋಧನೆಯಿಂದ ಗೊತ್ತಾಗಿದೆ.

ಇದು ಸರ್ಕಾರದ್ದೇ ದಾಖಲೆ ಎನ್ನುವುದು ವಿಶೇಷ. ನಿಯಮದ ಪ್ರಕಾರ, ನರೇಗಾದಲ್ಲಿ ಮಾನವಶ್ರಮದ ಕೆಲಸ ನಡೆಯಬೇಕು. ಆದರೆ ಜೆಸಿಬಿಯಲ್ಲಿ ಕೆಲಸ ಮಾಡಿ, ಕಾರ್ಮಿಕರ ಹೆಸರಿನಲ್ಲಿ ಮಸ್ಟರ್ ರೋಲ್ ಸೃಷ್ಟಿ, ಸಾಮಗ್ರಿ ಪೂರೈಕೆ ಮಾಡದಿದ್ದರೂ ನಕಲಿ ಬಿಲ್ ಸಲ್ಲಿಕೆ. ಮೃತರು ಅಥವಾ ಊರಲ್ಲಿ ಇಲ್ಲದವರ ಹೆಸರಿನಲ್ಲಿಯೂ ಹಾಜರಾತಿ ದಾಖಲಿಸಿ ಅರ್ಹರಲ್ಲ ದವರಿಗೆ ಹಣ ವರ್ಗಾವಣೆ–ಈ ಮುಂತಾದ ಅಕ್ರಮಗಳನ್ನು ಉಲ್ಲೇಖಿಸಲಾಗಿದೆ. ಇನ್ನೊಂದೆಡೆ, ರಾಜ್ಯದ ಬೊಕ್ಕಸಕ್ಕೆ ಅತಿ ಹೆಚ್ಚು ಆದಾಯ ತರುವ ಅಬಕಾರಿ ಇಲಾಖೆ ಬಗ್ಗೆ ಪದೇಪದೆ ಆರೋಪಗಳು ಕೇಳಿ ಬರುತ್ತಿರುವುದು ಕಡೆಗಣಿಸುವ ಸಂಗತಿಯಲ್ಲ. ಇಲಾಖೆ ಅಕ್ರಮದ ಬಗ್ಗೆ ಆಡಿಯೋಗಳು ಕೂಡ ಹೊರಬರುವುದು ಅಲ್ಲಿ ಏನೋ ನಡೆಯುತ್ತಿದೆಯೆನ್ನುವ ಅನುಮಾನಕ್ಕೆ ಪುಷ್ಟಿ ನೀಡುತ್ತವೆ. ವರ್ಗಾವಣೆ ದಂಧೆ, ಮಂಡ್ಲಿ ಮನಿ, ಕಿಕ್ ಬ್ಯಾಕ್ ಮುಂತಾದ ಅಪಾದನೆಗಳು ಸಾಲುಸಾಲಾಗಿ ಕೇಳಿ ಬರುತ್ತಿವೆ. ಈ ನಡುವೆ, ಅಬಕಾರಿ ಇಲಾಖೆಯಲ್ಲಿ 2.5 ಸಾವಿರ ಕೋಟಿ ರೂ. ಲಂಚ ವಹಿವಾಟು ನಡೆದಿದ್ದು, ಈ ಹಣವನ್ನು ಚುನಾವಣೆಗೆ ಬಳಸಲಾಗುತ್ತಿದೆ ಎಂದು ಆರೋಪಿಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರನ್ನು ಸಂಪುಟದಿಂದ ವಜಾಮಾಡಬೇಕು ಎಂದು ಆಗ್ರಹಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು 2024ರಲ್ಲಿ ಮಹಾರಾಷ್ಟ್ರ ವಿಧಾನಸಭಾ ಚುನಾವಣೆ ಪ್ರಚಾರದ ವೇಳೆ, ಕರ್ನಾಟಕದಲ್ಲಿ ಮದ್ಯ ವರ್ತಕರಿಂದ ಹಣ ವಸೂಲಿ ಬಗ್ಗೆ ಪ್ರಸ್ತಾಪಿಸಿದ್ದು ಸಂಚಲನವನ್ನೇ ಉಂಟುಮಾಡಿತ್ತು. ಸಿಎಲ್–7 ಮದ್ಯದ ಪರವಾನಗಿಗೆ ಸಂಬಂಧಿಸಿ ಲಂಚಕ್ಕೆ ಬೇಡಿಕೆಯಿಟ್ಟ ಅಬಕಾರಿ ಅಧಿಕಾರಿಗಳು ಲೋಕಾಯುಕ್ತಕ್ಕೆ ಸಿಕ್ಕಿಬಿದ್ದಿರುವ ಈಚಿನ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರ ಲಕ್ಷ್ಮೀನಾರಾಯಣ್, ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ಲೋಕಾಯುಕ್ತಕ್ಕೆ ದೂರು ಸಲ್ಲಿಸಿರುವ ಬೆಳವಣಿಗೆಯೂ ನಡೆದಿದೆ. ಈ ವಿಷಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ತನಿಖೆ ಮೂಲಕ ವಾಸ್ತವವನ್ನು ಜನರೆದುರಿಡುವ ಕೆಲಸ ವನ್ನು ತುರ್ತಾಗಿ ಮಾಡಬೇಕು.

# ನಿದ್ದೆ ಎಂಬ ದಿವ್ಯೌಷಧ?



**ರಾ**ತ್ರಿ ಎಂತಹ ದೊಡ್ಡ ಶಬ್ದ ಆಗಿದೆ ಅಲ್ವಾ? ಹೌದಾ ನನಗೆ ನಿದ್ದೆ ಬಂದಿತ್ತು. ರೈಲಿನಲ್ಲಿ ಹೋಗುವಾಗ ನಿದ್ದೆ ಬಂದು ಬಿಟ್ಟಿತ್ತು. ಆದ್ದರಿಂದ ಎರಡು ಸ್ಟೇಷನ್ ನಂತರ ಇಳಿದೆ. ಈ ಎರಡು ಘಟನೆಗಳಿಂದ ನಿದ್ದೆ ಎಂಬುದು ಒಂದು ಏನೂ ಅರಿವಾಗದ ನಿಷ್ಕ್ರಿಯ ಅವಧಿ ಅನ್ನಿಸುತ್ತದೆ ಅಲ್ಲವೇ? ದ.ರಾ.ಬೇಂದ್ರೆಯವರಂತೂ ಇನ್ನು ಒಂದು ಹೆಜ್ಜೆ ನಿದ್ದೆಯನ್ನು ಮರಣ ಎಂದು ಭಾವಿಸಿ ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ ನಗದೇಕೆ ಬಾರದೋ ಎಂದು ಬೇಡಿದ್ದಾರೆ. ನಮಗೆಲ್ಲ ಚಲನೆಯಿಲ್ಲದ ನಿಶ್ಚಲ ನಿದ್ದೆ ಜೀವಶಾಸ್ತ್ರೀಯವಾಗಿ ಏನು ಎಂದು ನೋಡೋಣ.

ಜೀವ ಶಾಸ್ತ್ರೀಯವಾಗಿ ನಿದ್ದೆ ಎನ್ನುವುದು ಮೆದುಳು ಮತ್ತು ದೇಹ ಪುನಶ್ಚೇತನಗೊಳ್ಳುವ ಒಂದು ಸಂಕೀರ್ಣ ಹಾಗೂ ಸಕ್ರಿಯ ಅವಧಿ. ಇಷ್ಟೊಂದು ಸಕ್ರಿಯವಾಗಿದ್ದರೂ ಇದು ಹೊರಗಿನ ಪರಿಸರದೊಂದಿಗೆ ವ್ಯವಹಾರ ಮಿತಗೊಳಿಸಿ ನಿರಂತರವಾಗಿ ಮತ್ತು ಗಳ ನಡುವೆ ಹೊರಳುತ್ತಾ ಪೂರ್ಣಗೊಳ್ಳುತ್ತದೆ. ಜೀವಮಾನವಿಡೀ ಸಕ್ರಿಯವಾಗಿರುವುದರಿಂದ ವಿಮುಖ ಗೊಳಿಸುವ ಈ ನಿದ್ದೆ ಈ ಚಕ್ರ ಯಾಕಾದರೂ ಬೇಕಪ್ಪ ಅಂದುಕೊಂಡಿದ್ದೀರಾ?

ನಿದ್ದೆ ಎಂಬುದು ಪ್ರಮುಖ ಘಟನೆಗಳ ಸರಮಾಲೆ. ಇದು ದೈಹಿಕವಾಗಿ ಮತ್ತು ಮಾನಸಿಕವಾಗಿ ರಿಪೇರಿ ಮತ್ತು ಬೆಳವಣಿಗೆಯ ಹಂತ. ಇದು ಕಲಿಕೆಗೆ, ಸ್ಮರಣ ಶಕ್ತಿಯ, ರೋಗ ನಿರೋಧಕ ಶಕ್ತಿ ಗಳ ಮರುಕಳಿಕೆಗೆ ನಿದ್ದೆಯೇ ಮದ್ದು. ಒಟ್ಟಾರೆಯಾಗಿ ಹೇಳಬೇಕೆಂದರೆ ದೈಹಿಕ ಮತ್ತು ಮಾನಸಿಕ ಆರೋಗ್ಯಗಳ ಪುನಶ್ಚೇತನದ ಅವಧಿಯೇ ನಿದ್ದೆ. ಪಂಜೆ ಮಂಗೇಶರಾಯರು ನಾಗರಹಾವು ಪದ್ಯದಲ್ಲಿ ಹೇಳಿದ ಹಾಗೆ ಬರಿಮೈ ತಣ್ಣಗೆ ಮನದಲಿ ಬಿಸಿಹಗೆ ಎಂಬಂತಹ ಸ್ಥಿತಿ ಈ ನಿದ್ದೆಯದ್ದು. ನಿದ್ದೆಯೆಂದರೆ ಸುಳಿಗಳಿರುವ ಕೆರೆಯಲ್ಲಿಳಿದಂತೆ. ಮೇಲ್ಗಡೆ ಶಾಂತವಾಗಿದ್ದರೂ ಒಳಗೆ ಒಳ ಸುಳಿಗಳೇ. ಮೆದುಳು ಬಹಳ ಚಟುವಟಿಕೆಯಿಂದ ಮೆದುಳು ತನ್ನ ಮನೆ ನಿರ್ವಹಣೆ ಮಾಡುತ್ತಾ ದೇಹದಲ್ಲಿರುವ ವಿಷ ವಸ್ತುಗಳನ್ನು ಹೊರಹಾಕುತ್ತಾ ನರ ಸಂಪರ್ಕಗಳನ್ನು ಬಲಗೊಳಿಸುವ ಕೆಲಸ ತ್ವರಿತವಾಗಿ ನಡೆಯುತ್ತಲೇ ಇರುತ್ತದೆ. ಅಂದರೆ ನಿದ್ದೆ ಎಂಬುದು ಆಹಾರ ಮತ್ತು ನೀರಿನಷ್ಟೇ ಮುಖ್ಯವಾದುದು.

ಒಂದು ಸ್ವಸ್ಥ ನಿದ್ದೆ ಪ್ರತಿಯೊಂದು ಅಂಗಾಂಶಗಳನ್ನು, ಶರೀರದ ವಿವಿಧ ವ್ಯೂಹಗಳನ್ನು ಮಾರ್ಪಡಿಸುತ್ತದೆ. ಉದಾಹರಣೆಗೆ ಮೆದುಳು ಹೃದಯ, ಶ್ವಾಸಕೋಶ, ರೋಗ ನಿರೋಧಕ ವ್ಯವಸ್ಥೆ, ಚಯಾಪಚಯ ಕ್ರಿಯೆ, ಮಾನಸಿಕ ಸ್ಥಿತಿ ಪ್ರತಿಯೊಂದೂ ಪ್ರಭಾವಿಸಲ್ಪಡುತ್ತದೆ. ಈ ನಿದ್ದೆಯಲ್ಲಿ ವ್ಯತ್ಯಯವಾದರೆ ರಕ್ತದ ಒತ್ತಡ, ಮಧುಮೇಹ, ಹೃದಯ ಸಂಬಂಧಿ ರೋಗಗಳು ಮುಂಗೋಪ, ಖಿನ್ನತೆ, ಬೊಜ್ಜು ಇತ್ಯಾದಿ ಕಾಡುತ್ತವೆ. ಆದ್ದರಿಂದ ನಿದ್ದೆ ಒಂದು ದಿವ್ಯೌಷಧ.

**-ದಿವಾಕರ ಶೆಟ್ಟಿ ಎಚ್, ಮಂಗಳೂರು**

## ಕವನ

ಅವಳು ದೂರವಾದಾಗ ಗುರುವಾದೆ
ಏಕೆ
ಇವಳು ಹತ್ತಿರವಾದಾಗ ಬಿಲವಾದೆ
ಏಕೆ
ಬಿರುಸಾದ ನುಡಿಯಲ್ಲಿ ಏನಿದೆಯೊ
ಏನೊ
ಜೀವನವುಮೃದುವಾದಾಗ ಬಲವಾದೆ
ಏಕೆ
ತಪ್ಪಿರುವ ಕಡೆಯಲ್ಲಿ ಒಪ್ಪದುವು
ಬರುವುದೆ
ತನುವದುವು ಜಲವಾದಾಗ
ಒಲವಾದೆ ಏಕೆ
ಮುದಿಡಿರುವ ಹೂವಲ್ಲಿ ಕಂಪದುವು
ಇರುವುದೆ
ಚಿಂತೆಯಿಂದುಮುಳುವಾದಾಗ
ಸುಪ್ತವಾದೆ ಏಕೆ
ಮರೆತಿರುವ ಪ್ರೀತಿಯಲಿ
ಸುಖವಿಹುದೆ ಈಶಾ ಮತ್ಸರವದುವು
ಚೆಲುವಾದಾಗ ಕದವಾದೆ ಏಕೆ?

# ನೆಲೆ ಇರುವುದು ಎಲ್ಲಿ?



**ವೃ**ಕ್ಷವನ್ನು ನೋಡುತ್ತಾ ಅದರ ಭೂಗತ ನೆಲೆಯನ್ನು ಕಂಡುಕೊಂಡಿರುವೆ. ಆಗಸದಲೆಲ್ಲಾ ರೆಕ್ಕೆ ಬಡಿದು ಅಲೆಯುವ ಪಕ್ಷಿಯು ನೆಲೆ ಗೂಡೆಂದು ಕಂಡು ಕೊಂಡಿರವೆ. ''ಶಿಷ್ಯನೆ! ಈಗ ನಿನ್ನ ಸರದಿ, ನೀನು ನಿನ್ನ ನೆಲೆ ಇರುವುದು ಎಲ್ಲಿ ಎಂದು ಹೇಳಬಲ್ಲೆಯಾ?'' ಎಂದರು ಗುರುಗಳು.

''ಗುರುಗಳೇ! ಅದು ಬಹಳ ಕಷ್ಟ, ನಮಗೆ ಕ್ಷಣಕ್ಕೊಂದು ನೆಲೆ ಮನದಲ್ಲಿ ನೆಲೆಸಿರುವ ನನಗೆ ಮನವು ಓಡುವೆಡೆ ಕ್ಷಣಕ್ಕೊಂದು ನೆಲೆ'' ಎಂದ ಶಿಷ್ಯ.

''ಅದೇನು ಎಂಬುದನ್ನು ತಿಳಿಯ ಹೇಳು'' ಎಂದರು ಗುರುಗಳು. ''ಮನದಲ್ಲಿ ನೆಲೆಸಿರುವೆನೆಂದು ತಿಳಿಯುವಾಗ ಮನೆಯಲ್ಲಿ ನೆಲೆಸಿರುವೆ. ಚಿಂತನೆಯಲ್ಲಿ ತೇಲಿರುವೆ ಎನ್ನುವಾಗ ಚಿಂತೆಯಲ್ಲಿ ಕಾಲ ನೂಕಿರುವೆ. ನಕ್ಷತ್ರ ನೋಡುವಾಗ ಆಗಸದಲ್ಲಿ ನೆಲೆ ಇರುವೆ. ಗುಡುಗನ್ನು ಆಲಿಸುವಾಗ ಮೋಡದಲ್ಲಿ ನೆಲೆಸಿ ರುವೆ. ಬೆಳದಿಂಗ ಳನ್ನು ಸವಿಯುವಾಗ ಚಂದ್ರಮನಲ್ಲಿ ನೆಲಸಿರುವೆ, ನಾವೆ ಯಲ್ಲಿ ತೇಲುವಾಗ ನದಿಯಲ್ಲಿ ನೆಲೆಸಿ ರುವೆ. ಹೂವನ್ನು ನೋಡುವಾಗ ವನದಲ್ಲಿ ನೆಲಸಿರುವೆ. ಭಾವದಲ್ಲಿರುವಾಗ ಭಕ್ತಿಯಲ್ಲಿ, ಬೆಳಕಿನ ಲ್ಲಿರುವಾಗ ಜ್ಞಾನದಲ್ಲಿ, ಕರ್ಮದಲ್ಲಿರುವಾಗ ಕ್ರಿಯೆಯಲ್ಲಿ, ಸತ್ಕೃತಿ ಯಲ್ಲಿರುವಾಗ ಸಂಸ್ಕೃತಿಯಲ್ಲಿ, ಕಾಮನೆಯಲ್ಲಿ ರುವಾಗ ಕಾಮನಬಿಲ್ಲಿನಲ್ಲಿ, ಧೃತಿಯಲ್ಲಿರುವಾಗ ಕೃತಿಯಲ್ಲಿ, ಗೀತದಲ್ಲಿರುವಾಗ ಸಂಗೀತದಲ್ಲಿ, ಶ್ವಾಸ ದಲ್ಲಿರುವಾಗ ವಿಶ್ವಾಸದಲ್ಲಿ, ಮಾತಿನಲ್ಲಿರುವಾಗ ಮೌನದಲ್ಲಿ, ಬೇಸರ ದಲ್ಲಿರುವಾಗ ಆಸರದಲ್ಲಿ, ಆಶೆಯಲ್ಲಿರುವಾಗ ಬಯಕೆಯಲ್ಲಿ, ಸಂಗದಲ್ಲಿರುವಾಗ ಏಕಾಂತ ದಲ್ಲಿ, ಜಗದಲ್ಲಿರುವಾಗ ಅಂತರಂಗದಲ್ಲಿ, ಪ್ರಾಣನಲ್ಲಿರುವಾಗ ಪ್ರಜ್ಞೆಯಲ್ಲಿ, ಹಾದಿಯಲ್ಲಿರುವಾಗ ಆದಿ ಅಂತ್ಯದಲ್ಲಿ, ರಾಗದಲ್ಲಿರುವಾಗ ಅನುರಾಗ ವಿರಾಗದಲ್ಲಿ, ತಾಳದಲ್ಲಿರುವಾಗ ನರ್ತನದಲ್ಲಿ, ವಿಚಾರದಲ್ಲಿರುವಾಗ ಆಚಾರ ಪ್ರಚಾರದಲ್ಲಿ, ನಿಲುವಿನಲ್ಲಿರುವಾಗ ನಿರ್ಣಯದಲ್ಲಿ, ಗುರುವೊಡನೆ ಇರುವಾಗ ಗುರುತರದಲ್ಲಿ, ದಿಗಂತದಲ್ಲಿರುವಾಗ ಅನಂತದಲ್ಲಿ, ಸಂತ ರೊಡರಿರುವಾಗ ಭಗವಂತ ನಲ್ಲಿ, ಆತ್ಮನಲ್ಲಿರುವಾಗ ಪರಮಾತ್ಮನಲ್ಲಿ ನೆಲೆಗೊಂಡಿ ರುವೆ. ನೋಡಿದಿರಾ! ಗುರುಗಳೇ! ಕ್ಷಣಕ್ಕೊಂದು ನೆಲೆ ಈ ಮನಕ್ಕೆ''– ಎಂದ ಶಿಷ್ಯ.

''ಆತ್ಮವು ಪರಮಾತ್ಮನಲ್ಲಿ ನೆಲೆಗೊಂಡಿರುವುದು ಎಂಬುದು ತಿಳಿಯಲು ನಿನ್ನ ಮನವು ನಡೆದು ಬಂದು ಕೊನೆ ಮುಟ್ಟುವ ಘಟ್ಟ ಅದೇ ಸತ್ಯದ ಹುಟ್ಟು, ಅದೇ ಎಲ್ಲರ ನೆಲೆ ಎಂದಾಗ ಗುರು ಶಿಷ್ಯರ ಹೃದಯ ನೆಲೆ ಒಂದಾಯಿತು.

# ಜ.27ರಂದು ಅಂಗವಿಕಲರ ಕಲ್ಯಾಣಾಧಿಕಾರಿ ವಿರುದ್ಧ ಧರಣಿ

• ಪ್ರಜೋದಯ ವರದಿ




**ಹಾಸನ:** ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ ಅವರು ಅಂಗವಿಕಲರ ವಿರುದ್ಧ ದರ್ಪ, ದೌರ್ಜನ್ಯ ತೋರುತ್ತಿರುವುದನ್ನು ಖಂಡಿಸಿ ಜ.27 ರಂದು ಕರ್ನಾಟಕ ಅಂಧರ ಒಕ್ಕೂಟ ದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸಲಾಗುವುದೆಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ತಮ್ಮಯ್ಯ ಅವರು ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನುಪಮಾ ಅವರು ಅಂಗವಿಕಲರ ಬಗ್ಗೆ ಅವಮಾನಕರ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಾರೆ. ನಮ್ಮನ್ನು ತುಚ್ಛವಾಗಿ ಕಾಣುತ್ತಿದ್ದಾರೆ. ಅಂಗವಿಕಲರಿಗೆ ಇರುವ ಸೌಲಭ್ಯಗಳ ಬಗ್ಗೆ ಯಾವುದೇ ಮಾಹಿತಿ ನೀಡುತ್ತಿಲ್ಲ. ಹಾಗಾಗಿ ಕೂಡಲೇ ಅವರ ಡೆಪ್ಟೇಷನ್ ರದ್ದು ಮಾಡಬೇಕೆಂದು ಒತ್ತಾಯಿಸಿದರು.

ಈ ಹುದ್ದೆಗೆ ಎಂಎಸ್‌ಡಬ್ಲ್ಯೂ ಅಥವಾ ವಿಶೇಷ ತರಬೇತಿ ನಿಗದಿಪಡಿಸಲಾಗಿದೆ. ಆದರೆ ಯಾವುದೇ ವಿದ್ಯಾರ್ಹತೆ ಇಲ್ಲದ ಸಚಿವಾಲಯದ ಶಾಖಾಧಿಕಾರಿಯನ್ನು ನಿಯೋಜನೆ ಮಾಡ ಲಾಗಿದೆ. ಅವರ ವಿರುದ್ಧ ಹಿಂದೆಯೂ ಧರಣಿ ನಡೆಸಿದ್ದರೂ ಯಾವುದೇ ಪ್ರಯೋಜನ ಆಗಿಲ್ಲ. ಹೀಗಾಗಿ ಮತ್ತೊಮ್ಮೆ ಜ.27 ರಂದು ಬೆಳಿಗ್ಗೆಯಿಂದ ಸಂಜೆವರೆಗೆ ಪ್ರತಿಭಟನೆ ಮಾಡಲಾಗುತ್ತಿದೆ ಎಂದರು.

ಧರಣೇಂದ್ರ ಎಂಬ ಅಂಧವ್ಯಕ್ತಿ ಕಳೆದ 25 ವರ್ಷಗಳಿಂದ ನಗರದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ದೂರವಾಣಿ ಪೆಟ್ಟಿಗೆ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು. 2018ನೇ ಸಾಲಿ ನಲಿ ಹೊಸ ಕಟ್ಟಡ ನಿರ್ಮಾಣದ ಕಾರಣ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯ ಅಧಿಕಾರಿ ಹಾಗು ಅಂದಿನ ಜಿಲ್ಲಾಧಿಕಾರಿ ಪ್ರಿಯಾಂಕ ಮೇರಿ ಫ್ರಾನ್ಸಿಸ್ ಅವರ ಮಾನವೀಯ ಪ್ರಯತ್ನದ ಮೇರೆಗೆ ಆಸ್ಪತ್ರೆಯ ಒಂದು ಮೂಲೆಗೆ ದೂರವಾಣಿ ಬೂತ್ ಸ್ಥಳಾಂತರ ಮಾಡಲಾಗಿತ್ತು. ಹೊಸ ಕಟ್ಟಡ ನಿರ್ಮಾಣ ನಂತರ ಮೊದಲ ಜಾಗಕ್ಕೆ ಸ್ಥಳಾಂತರ ಮಾಡಿಸುವ ಭರವಸೆ ನೀಡಲಾಗಿತ್ತು. ಕಳೆದ 2 ವರ್ಷಗಳಿಂದ ಸ್ಥಳಾಂತರ ಮಾಡದೆ, ತೊಂದರೆ ಕೊಡಲಾಗುತ್ತಿದೆ ಎಂದು ದೂರಿದರು.

ಇದೀಗ ಯಾವುದೇ ವ್ಯಾಪಾರ ಇಲ್ಲದೆ ಧರಣೇಂದ್ರ ಅವರ ಜೀವನ ಕಷ್ಟವಾಗಿದೆ. ಜೀವನ ದುಃಸ್ಥಿತಿಯಲ್ಲಿದೆ. ಈ ಬಗ್ಗೆ ಕೇಳಿದರೆ ಆಡಳಿತ ಮಂಡಳಿ ತೀರ್ಮಾನ ಬೇಕೆಂದು ಹಿಂಬರಹ ನೀಡಲಾಗಿದೆ. ಆದರೆ ಇಬ್ಬರು ಸಾಮಾನ್ಯರಿಗೆ ಜೆರಾಕ್ಸ್ ಮತ್ತು ಔಷಧಿ ಅಂಗಡಿ ಇಟ್ಟುಕೊಳ್ಳಲು ಜಿಸಿ ತೀರ್ಮಾನ ಇಲ್ಲದೇ ಅವಕಾಶ ನೀಡಲಾಗಿದೆ ಎಂದು ಅಳಲು ತೋಡಿಕೊಂಡರು ಎಂದು ಹೇಳಿದರು.

ಒಕ್ಕೂಟದ ಚಂದ್ರಶೇಖರ್, ಬಾಬು, ಧರಣೇಂದ್ರ, ಸುದರ್ಶನ್ ಇದ್ದರು.

# ಯುವಕರಿಂದ ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯ

• ಪ್ರಜೋದಯ ವರದಿ



**ನುಗ್ಗೇಹಳ್ಳಿ:** ದೇಶ ಕಟ್ಟುವ ಕೆಲಸಕ್ಕೆ ಯುವಕರು ಮುಂದಾದರೆ, ಹಿಂದೂ ಸಮಾಜದ ಏಕತೆ, ಬಲಿಷ್ಠ ರಾಷ್ಟ್ರ ನಿರ್ಮಾಣ ಸಾಧ್ಯವಾಗುತ್ತದೆಂದು ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಹೇಳಿದರು.

ಹೊಯ್ಸಳ ವೇದಿಕೆ ಆವರಣದಲ್ಲಿ ಹೋಬಳಿ ಹಿಂದೂ ಸಮಾಜೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಹಿಂದೂ ಸಮಾಜೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹೋಬಳಿ ಕೇಂದ್ರದಲ್ಲಿ ಇದೇ ಮೊದಲ ಬಾರಿಗೆ ಹಿಂದೂ ಸಮಾಜೋತ್ಸವ ಸಮಿತಿ ವತಿಯಿಂದ ಹಿಂದೂ ಸಮಾಜೋತ್ಸವ ನಡೆಯುತ್ತಿದ್ದು, ವಿಶ್ವ ಹಿಂದೂ ಪರಿಷತ್ ಪ್ರಾಂತ ಸಂಯೋಜಕರಾದ ಪ್ರಬಂಜನ್ ಸೂರ್ಯರವರು ದಿಕ್ಸೂಚಿ ಭಾಷಣ ಮಾಡುತ್ತಿದ್ದಾರೆ ಭಾರತ ದೇಶದಲ್ಲಿ ಬಲಿಷ್ಠ ಹಿಂದೂ ಸಮಾಜವನ್ನು ಬಲಪಡಿಸುವ ದೃಷ್ಟಿಯಿಂದ ಕಳೆದ 100 ವರ್ಷಗಳಿಂದ ರಾಷ್ಟ್ರೀಯ ಸ್ವಯಂಸೇವಾ ಸಂಘ (ಆರ್‌ಎಸ್‌ಎಸ್) ಕಾರ್ಯನಿರ್ವಹಿಸುತ್ತಿದೆ ವಿಶ್ವದಲ್ಲಿಯೇ ಭಾರತ ದೇಶವನ್ನು ಬಲಿಷ್ಠ ಹಿಂದೂ ದೇಶವನ್ನಾಗಿ ಮಾಡಲು ಯುವಕರು ಕೈಜೋಡಿಸುವಂತೆ ತಿಳಿಸಿದರು.

ವಿಶ್ವ ಹಿಂದೂ ಪರಿಷತ್ ಪ್ರಾಂತ ಸಂಯೋಜಕ ಪ್ರಬಂಜನ್ ಸೂರ್ಯ ಮಾತನಾಡಿ, ದೇಶ ದಲ್ಲಿ ಹಿಂದೂ ಸಮಾಜದ ಉಳಿವಿಗೆ ಆರ್‌ಎಸ್‌ಎಸ್ ಪಾತ್ರ ಬಹು ಮುಖ್ಯವಾಗಿದೆ. 100 ವರ್ಷ ಗಳನ್ನು ಪೂರೈಸಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ ದೇಶ ಕಟ್ಟುವ ಕೆಲಸವನ್ನು ಮಾಡಿದೆ ಕೆಲವು ರಾಜಕೀಯ ಪಕ್ಷಗಳು ತನ್ನ ವೋಟ್ ಬ್ಯಾಂಕ್ ಉಳಿಸಿಕೊಳ್ಳಲು ಆರ್‌ಎಸ್‌ಎಸ್ ಕುರಿತು ಕೆಲವು ಆರೋಪಗ ಳನ್ನು ಮಾಡುತ್ತಾರೆ. ದೇಶದ ಸಂಸ್ಕೃತಿ ಧರ್ಮ ಉಳಿಸುವ ಕೆಲಸವನ್ನು ಜೊತೆಗೆ ದೇಶ ಕಟ್ಟುವ ಕೆಲಸವನ್ನು ಸ್ವಯಂ ಸೇವಾ ಸಂಘ ಮಾಡುತ್ತಿದ್ದು ಹೋಬಳಿ ಕೇಂದ್ರದಲ್ಲಿ ಮುಂಬರುವ ದಿನಗಳಲ್ಲಿ ಸಂಘಟನೆಗೆ ಹೆಚ್ಚಿನ ಒತ್ತು ನೀಡುವಂತೆ ಹಿಂದೂ ಸಮಾಜದ ಅಭಿಮಾನಿಗಳಲ್ಲಿ ಮನವಿ ಮಾಡಿದರು. ವಿಶ್ವ ಹಿಂದೂ ಪರಿಷತ್ ಸಂಘಟನೆ ಪ್ರಮುಖರಾದ ಸುವರ್ಣ, ತಾಲ್ಲೂಕು ಅಧ್ಯಕ್ಷ ಶಿವಶಂಕರ್, ಬಿಜೆಪಿ ಅಧ್ಯಕ್ಷ ಗಂಗಾಧರ್ ಪರಮ, ಪ್ರಮುಖರಾದ ಛಾಯಾ ಕೃಷ್ಣಮೂರ್ತಿ, ತೂಬಿನಕೆರೆ ಗಿರೀಶ್, ಮುಳ್ಳುಕೆರೆ ಪ್ರಶಾಂತ್, ಶೋಭಾ, ಹೇಮಲತಾ, ಕುಸುಮ, ಸತೀಶ್, ಬಸವರಾಜ್ ಹಾಜರಿದ್ದರು.

# ಐಪಿಎಲ್: ಜೆಮಿನಿ ಎಐ ಜೊತೆ ಒಪ್ಪಂದ

INDIAN PREMIER LEAGUE

• ಪ್ರಜೋದಯ ವರದಿ

**ನವದೆಹಲಿ:** ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು, 2026ರ ಐಪಿಎಲ್‌ಗೆ ಪೂರ್ವಭಾವಿಯಾಗಿ ಗೂಗಲ್‌ನ ಕೃತಕ ಬುದ್ಧಿಮತ್ತೆ ಕಂಪನಿ ಯಾದ ಜೆಮಿನಿ ಜೊತೆ 270 ಕೋಟಿ ಮೊತ್ತದ ಪ್ರಾಯೋ ಜಕತ್ವದ ಒಪ್ಪಂದ ಮಾಡಿಕೊಂಡಿದೆ.

ಈ ಒಪ್ಪಂದ ಮೂವರು ವರ್ಷಗಳ ಅವಧಿಯದ್ದಾಗಿದ್ದು, ಐಪಿಎಲ್ ಜಾಗತಿಕ ವರ್ಚಸ್ಸನ್ನು ಪುನಃ ಜಾಹೀರುಪಡಿಸಿದೆ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದರು.

ಜೆಮಿನಿ ಪ್ರತಿಸ್ಪರ್ಧಿಯಾಗಿರುವ ಚಾಟ್ ಜಿಪಿಟಿ, ಹಾಲಿ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪ್ರಾಯೋಜಕರುಗಳಲ್ಲಿ ಒಂದಾಗಿದೆ. 2025ರ ನವೆಂಬರ್‌ನಲ್ಲಿ ಈ ಒಪ್ಪಂದ ನಡೆದಿತ್ತು.

ಗೇಮಿಂಗ್ ವೇದಿಕೆಯಾದ ಡ್ರೀಮ್ 11 ಅನ್ನು ಕೇಂದ್ರ ಸರ್ಕಾರ 2025ರಲ್ಲಿ ನಿಷೇಧಿಸಿದ ಬಳಿಕ ಬಿಸಿಸಿಐ, ಅಪೋಲೊ ಟೈರ್ಸ್ ಜೊತೆ 579 ಕೋಟಿ ಮೊತ್ತಕ್ಕೆ ಪ್ರಧಾನ ಪ್ರಾಯೋಜಕತ್ವದ ಒಪ್ಪಂದ ಮಾಡಿಕೊಂಡಿತ್ತು.

ವಿಶ್ವದ ಅತಿ ದೊಡ್ಡ ಟಿ–20 ಲೀಗ್ ಆಗಿರುವ ಐಪಿಎಲ್‌ಗೆ ಟಾಟಾ ಸಮೂಹವು ಪ್ರಧಾನ ಪ್ರಾಯೋಜತ್ವ (ಜೆರ್ಸಿ ಸ್ಪಾನ್ಸರ್ ಷಿಪ್) ಹೊಂದಿದೆ.

ಜೆಮಿನಿ ಈಗ ಐಪಿಎಲ್‌ನ ಪ್ರಾಯೋಜಕರಲ್ಲಿ ಒಬ್ಬರಾಗಿರುವುದು ವಹಿಸಿಕೊಂಡಿರುವುದು, ಭಾರತೀಯ ಕ್ರಿಕೆಟ್‌ನಲ್ಲಿ ಎಐ ಕಂಪನಿಗಳು ತೋರು ತ್ತಿರುವ ಆಸಕ್ತಿಯನ್ನು ಸೂಚಿಸುತ್ತಿದೆ.ಐಪಿಎಲ್ ಮಾರ್ಚ್ 26ರಿಂದ ಮೇ 31ರವರೆಗೆ ನಡೆಯಲಿದೆ.

# ಎಸ್‌ಐಆರ್: ವಿಚಾರಣೆಗೆ ಹಾಜರಾದ ಕ್ರಿಕೆಟಿಗ ಮೊಹಮ್ಮದ್ ಶಮಿ

• ಪ್ರಜೋದಯ ವರದಿ



**ಕೋಲ್ಕತ್ತಾ:** ಪಶ್ಚಿಮಬಂಗಾಳದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ನಡೆದ ವಿಚಾರಣೆಗೆ ಭಾರತೀಯ ಕ್ರಿಕೆಟಿಗ ಮೊಹಮ್ಮದ್ ಶಮಿ ಅವರು ಮಂಗಳವಾರ ಹಾಜರಾದರು.

ಶಮಿ ಅವರು ಅಗತ್ಯ ದಾಖಲೆಗಳೊಂದಿಗೆ ವಿಚಾರಣೆಗೆ ಹಾಜರಾದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಸ್‌ಐಆರ್ ವೇಳೆ ಶಮಿ ಅವರು ಸಲ್ಲಿಸಿದ್ದ ಅರ್ಜಿಯಲ್ಲಿ ವಾಸಸ್ಥಳದ ಮಾಹಿತಿ ಯಲ್ಲಿ ವ್ಯತ್ಯಾಸವಿತ್ತು. ಹಾಗಾಗಿ, ವಿಚಾರಣೆಗೆ ಹಾಜರಾಗುವಂತೆ ಅವರಿಗೆ ನೋಟಿಸ್ ನೀಡ ಲಾಗಿತ್ತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉತ್ತರಪ್ರದೇಶ ಮೂಲದ ಶಮಿ ಅವರು ಹಲವು ವರ್ಷಗಳಿಂದ ಪಶ್ಚಿಮಬಂಗಾಳದಲ್ಲಿ ನೆಲಸಿದ್ದಾರೆ.

# ಪಕ್ಷದ ವಿಚಾರಗಳಲ್ಲಿ ನಿತಿನ್ ನಬಿನ್ ನನಗೂ ಬಾಸ್: ಪ್ರಧಾನಿ ನರೇಂದ್ರ ಮೋದಿ

• ಪ್ರಜೋದಯ ವರದಿ

**ನವದೆಹಲಿ:** ನಾನು ಭಾರತೀಯ ಜನತಾ ಪಕ್ಷದ ಕಾರ್ಯಕರ್ತ, ಪಕ್ಷದ ವಿಚಾರಗಳಲ್ಲಿ ನಿತಿನ್ ನಬಿನ್ ನನಗೂ ಬಾಸ್ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಹೇಳಿದರು.

ಇಲ್ಲಿನ ಪಕ್ಷದ ಕಚೇರಿಯಲ್ಲಿ ಬಿಜೆಪಿ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅವರು ಅಧಿಕಾರ ವಹಿಸಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿತಿನ್ ನಬಿನ್ ಅವರಿಗೆ ಅಭಿನಂದನೆಗಳನ್ನು ತಿಳಿಸಿದ ಪ್ರಧಾನಿ ಮೋದಿ, ನಿಮಗೆ ವಯಸ್ಸು ಹಾಗೂ ರಾಜಕೀಯ ಅನು ಭವವಿದೆ, ಪಕ್ಷವನ್ನು ಮತ್ತಷ್ಟು ಬೆಳೆಸುವ ಜವಾಬ್ದಾರಿ ನಿಮ್ಮ ಮುಂದಿದೆ ಎಂದರು.

ಪಕ್ಷದ ವಿಚಾರದಲ್ಲಿ ನಾನು ಕಾರ್ಯಕರ್ತನಾಗಿದ್ದು ನನಗೂ ನೀವೇ ಬಾಸ್ ಎಂದು ಮೋದಿ ಹೇಳಿದರು. ನಿಮ್ಮ ಮುಂದೆ ಬಿಜೆಪಿ ಹೊಣೆಗಾರಿಕೆ ಮಾತ್ರವಲ್ಲ ಎನ್‌ಡಿಎ ನಡುವಿನ ಸಹಕಾರ ವನ್ನು ಖಚಿತಪಡಿಸುವ ಜವಾಬ್ದಾರಿ ಇದೆ ಎಂದರು.

ವಾಜಪೇಯಿ, ಆಡ್ವಾಣಿ ಮತ್ತು ಮುರಳಿ ಮನೋಹರ ಜೋಶಿ ಅವರ ನೇತೃತ್ವದಲ್ಲಿ ಬಿಜೆಪಿ ಶೂನ್ಯದಿಂದ ಬೆಳವಣಿಗೆಯಾಯಿತು. ವೆಂಕಯ್ಯ ನಾಯ್ಡು ಮತ್ತು ನಿತಿನ್ ಗಡ್ಕರಿ ಅವರಂತಹ ನಾಯಕರು ಪಕ್ಷವನ್ನು ವಿಸ್ತಾರಗೊಳಿಸಿದರು. ರಾಜನಾಥ್ ಸಿಂಗ್ ಅವರು ಪಕ್ಷದ ಅಧ್ಯಕ್ಷರಾಗಿದ್ದ ವೇಳೆ ಬಿಜೆಪಿ ಸಂಪೂರ್ಣ ಬಹುಮತ ಪಡೆಯಿತು ಎಂದರು.

ಅಮಿತ್ ಶಾ ನೇತೃತ್ವದಲ್ಲಿ ನಮ್ಮ ಪಕ್ಷ ಹಲವು ರಾಜ್ಯಗಳಲ್ಲಿ ಸರ್ಕಾರ ರಚನೆ ಮಾಡಿತು, ನಡ್ಡಾ ಅವರು ಸ್ಥಳೀಯ ಮಟ್ಟದಲ್ಲಿ ಪಕ್ಷವನ್ನು ಬಲಪಡಿಸಿದರು ಎಂದು ಮೋದಿ ಹೇಳಿದರು.

ನಿಕಟಪೂರ್ವ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಧಿಕಾರಾವಧಿ ಪೂರ್ಣಗೊಂಡ ಬೆನ್ನಲ್ಲೇ ಪಕ್ಷ ನಡೆಸಿದ ಚುನಾವಣೆಯಲ್ಲಿ ನಿತಿನ್ ಅವರು ಅವಿರೋಧವಾಗಿ ಆಯ್ಕೆಯಾದರು.

# ಫೆ.20 ರಂದು ಆಲ್ಫಾ ಚಿತ್ರ ಬಿಡುಗಡೆ




• ಪ್ರಜೋದಯ ವರದಿ

**ಹಾಸನ:** ಆಲ್ಫಾ, ಮೆನ್ ಲವ್ ವಾಯ್ಲೆನ್ಸ್ ಚಲನಚಿತ್ರ ಫೆ.20ರಂದು ರಾಜ್ಯಾದ್ಯಂತ ಬಿಡುಗಡೆ ಆಗಲಿದೆ ಎಂದು ಚಿತ್ರದ ನಾಯಕ ನಟ ಹೇಮಂತ್ ಕುಮಾರ್ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿತ್ರದಲ್ಲಿ ನನ್ನದು ಮಿಡಲ್ ಕ್ಲಾಸ್ ಹುಡುಗನ ಪಾತ್ರ. ಒಂದು ಉತ್ತಮ ಕತೆಯ ಮೇಲೆ ಚಿತ್ರ ಸಾಗುತ್ತದೆ. ಕಮರ್ಷಿ ಯಲ್ ಚಿತ್ರ ಕೂಡ. ಹಲವು ಹಿರಿಯ ನಟ–ನಟಿಯರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಚಿತ್ರದಲ್ಲಿ ತಂದೆ–ಮಗನ ಸೆಂಟಿಮೆಂಟ್ ಚೆನ್ನಾಗಿದೆ. ಇಡೀ ಕುಟುಂಬದವರು ಯಾವುದೇ ಮುಜುಗಜ ಇಲ್ಲದೆ ಚಿತ್ರ ನೋಡಬಹುದು ಎಂದರು.

ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಚಿತ್ರದ ಟೀಸ್ಟರ್ ಪ್ರೇಕ್ಷಕರ ಮನ ಗೆದ್ದಿದೆ. ಹೆಸರಿಗೆ ತಕ್ಕಂತೆ ಪ್ರತಿಯೊಂದು ಪಾತ್ರಗಳೂ ಪ್ರಬಲ ಆಗಿವೆ. ನಮ್ಮ ಚಿತ್ರದಲ್ಲಿ ಡಾನ್ಸ್, ಕಂಟೆಂಟ್ ಚೆನ್ನಾಗಿದೆ. ಇಷ್ಟದಿಂದ ಕಷ್ಟಪಟ್ಟು ಮಾಡಿದ್ದೇವೆ, ಜನರೂ ಇಷ್ಟ ಪಡುವ ವಿಶ್ವಾಸವಿದೆ. ಜನರ ಮನೋರಂಜನೆಗೆ ಬೇಕಾದ ಎಲ್ಲವೂ ಇದೆ. ಟೀಸ್ಟರ್, ಹಾಡುಗಳಿಗೆ, ಟೀಸ್ಟರ್‌ಗೆ ಅದ್ಭುತ ಪ್ರತಿಕ್ರಿಯೆ ಸಿಕ್ಕಿದೆ, ಹೊಸಬರ ಸಿನಿಮಾ ರೀತಿ ಇಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ನಾಯಕ ನಟಿ ಗೋಪಿಕಾ ಸುರೇಶ್, ನಟಿ ಅಯನಾ ಇದ್ದರು.

# ಆರೋಗ್ಯ ಸಮಸ್ಯೆ ಮುಚ್ಚಿಟ್ಟುಕೊಳ್ಳದಿರಿ

» ಮೊದಲನೇ ಪುಟದಿಂದ

ಬರುವ ಮುಂಚೆ ಮನಸ್ಸಿಗೆ ಕಾಯಿಲೆ ಬಂದಿರುತ್ತದೆ. ಆಗ ನಾವು ಸರಿ ಮಾಡಿಕೊಂಡರೆ ದೇಹಕ್ಕೆ ಬರುವುದನ್ನು ತಡೆಯಬಹುದು. ರೋಗ ಬರುವುದರಿಂದ ಸಮಸ್ಯೆಯಾಗುವುದಿಲ್ಲ. ಸಣ್ಣ ಸಮಸ್ಯೆ ಕಂಡು ಬಂದಾಗ ವೈದ್ಯರನ್ನು ಭೇಟಿಯಾದರೆ ದೊಡ್ಡ ಸಮಸ್ಯೆ ತಡೆಗಟ್ಟಬಹುದು ಎಂದರು.



ಸಮಾಜದಲ್ಲಿ ಮನುಷ್ಯ ಸಂಘ ಜೀವಿ. ಪ್ರತಿಯೊಬ್ಬ ವ್ಯಕ್ತಿ ಕೂಡ ಸಮಾಜದ ಆಸ್ತಿ. ಎಲ್ಲರೂ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಇಂದಿನ ಯುವ ಜನಾಂಗ ಅಶಿಸ್ತಿನ ಜೀವನದಿಂದ ಆನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಜನ್ಮ ಪಡೆದ ತಂದೆ ತಾಯಿಯಿಂದ ಹಣ-ಆಸ್ತಿ ಪಡೆದುಕೊಳ್ಳುವುದು ಮಾತ್ರವಲ್ಲ ಅವರ ದೇಹದ ಅಂಗಗಳನ್ನು ಪಡೆದುಕೊಳ್ಳುತ್ತಿರುವುದನ್ನು ನೋಡಿದರೆ ಬೇಸರವಾಗುತ್ತದೆ. ಶಿಸ್ತಿನ ಜೀವನ ನಡೆಸುವ ಜೊತೆಗೆ ವೈದ್ಯರು ನೀಡುವ ಸಲಹೆಯನ್ನು ತಪ್ಪದೆ ಪಾಲಿಸಬೇಕೆಂದು ಹೇಳಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಶ್ರೀಬಾಲಗಂಗಾಧರನಾಥ ಸ್ವಾಮೀಜಿ ಅವರು ಗ್ರಾಮೀಣ ಪ್ರದೇಶದ ಜನರಿಗೂ ಕಡಿಮೆ ದರದಲ್ಲಿ ಶಿಕ್ಷಣ ಹಾಗು ಆರೋಗ್ಯ ಲಭಿಸಬೇಕೆಂಬ ಆಶಯ ಹೊಂದಿದ್ದರು. ಅದರಂತೆ ಶ್ರೀಮಠದ ವತಿಯಿಂದ ಪ್ರತಿ ವರ್ಷ ಅವರ ಜನ್ಮ ದಿನಾಚರಣೆಯಂದು ಉಚಿತ ಬೃಹತ್ ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಿಕೊಂಡು ಬರಲಾಗುತ್ತಿದೆ. ಬೆಂಗಳೂರಿನ ಖ್ಯಾತ ವೈದ್ಯರು ಕೂಡ ಶಿಬಿರದಲ್ಲಿ ಭಾಗವಹಿಸಿರುವುದು ನಮ್ಮ ಸೌಭಾಗ್ಯ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಆದಿಚುಂಚನಗಿರಿಯನ್ನು ಚಿನ್ನದ ಗಿರಿಯನ್ನಾಗಿ ಮಾಡಿದವರು ಬಾಲಗಂಗಾಧರನಾಥ ಶ್ರೀಗಳು. ಅದಕ್ಕೆ ವಜ್ರದ ಕಿರೀಟ ಇಟ್ಟವರು ನಿರ್ಮಲಾನಂದನಾಥ ಶ್ರೀಗಳು. ಶ್ರೀ ಮಠದ ವಿದ್ಯಾ ಸಂಸ್ಥೆಗಳಲ್ಲಿ ಎಲ್ಲಾ ವರ್ಗದ 1.60 ಲಕ್ಷ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದು ಹೆಮ್ಮೆಯ ವಿಷಯ. ಬೆಳ್ಳೂರಿನಲ್ಲಿ ಹೈಟೆಕ್ ಆಸ್ಪತ್ರೆ ತೆರೆದು ಜನಸಾಮನ್ಯರಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಮಾತನಾಡಿ, ಸರ್ವ ಜನಾಂಗದವರೂ, ಸನ್ಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ನೀಡುತ್ತಿದ್ದಾರೆ. ರಾಜ್ಯ ಒಕ್ಕಲಿಗರ ಸಂಘದ ಎಲ್ಲಾ ಚಟುವಟಿಕೆಗಳು ಪೂಜ್ಯ ಶ್ರೀಗಳ ಆಶೀರ್ವಾದಿಂದ ನಡೆಯುತ್ತಿದೆ. ಇಂದು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ. ನಾನು ಮೂರು ಬಾರಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕನಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಹಾಗು ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ ಹಾಸನದಲ್ಲಿ ಸುಮಾರು ಹತ್ತು ಎಕರೆ ಜಮೀನು ಖರೀದಿಸಿ ಶೈಕ್ಷಣಿಕ ಕ್ಷೇತ್ರಕ್ಕೆ ಕೊಡುಗೆ ನೀಡುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಗಂಗಾಧರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಸ್.ರಘುಗೌಡ, ಬಾಗೂರು ಮಂಜೇಗೌಡ, ರೆಡ್ ಕ್ರಾಸ್ ಸಂಸ್ಥೆಯ ಹೆಚ್.ಪಿ. ಮೋಹನ್, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ಪತ್ರಕರ್ತ ರವಿ ನಾಕಲಗೂಡು, ಕಂಚಮಾರನಹಳ್ಳಿ ಕಾಂತರಾಜು ಮತ್ತಿತರರರು ಹಾಜರಿದ್ದರು.

# ಬೆಳಗುಂಬದಲ್ಲಿ ಶಿಲಾಯುಗ ನಿಲುವುಗಲ್ಲು, ಶಾಸನ ಪತ್ತೆ

## 3 ಸಾವಿರ ವರ್ಷ ಪುರಾತನ ಸಮಾಧಿ ಸ್ಥಳ ಗೋಚರ: ಡಾ.ಹರೀಶ್ ಮಾಹಿತಿ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಬೆಳಗುಂಬ ಗ್ರಾಮದಲ್ಲಿ ಪ್ರಾಚೀನ ಕಾಲ ಕುರುಹುಗಳಿದ್ದು, ಕ್ಷೇತ್ರ ಕಾರ್ಯ ಕೈಗೊಂಡಾಗ ಶಿಲಾಯುಗ ಕಾಲಕ್ಕೆ ಸೇರಿದ ನಿಲುವುಗಲ್ಲು ಪತ್ತೆಯಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕ, ಇತಿಹಾಸ ತಜ್ಞ ಡಾ.ಹರೀಶ್ ಅವರು ತಿಳಿಸಿದರು.

ಈ ಗ್ರಾಮದಲ್ಲಿ ಹೊಯ್ಸಳ ವಿಷ್ಣುವರ್ಧನ ಹಾಗು 2ನೇ ವೀರಬಲ್ಲಾಳನ ಕಾಲದಲ್ಲಿ ಕೆತ್ತಿಸಿದ 12ನೇ ಶತಮಾನದ ಮೂರು ಶಾಸನಗಳಿದ್ದು, ಸ್ಥಳೀಯ ನಾಡ ಪ್ರಭುಗಳಿಂದ ಮೂರು ಶಿವಾಲಯಗಳು, ಕೆರೆ, ಬಾವಿಗಳು, ಮಂಟಪಗಳನ್ನು ಆ ಕಾಲದಲ್ಲೇ ನಿರ್ಮಿಸಲಾಗಿದೆ. ಇಲ್ಲಿನ ವೀರಭದ್ರನ ದೇವಾಲಯದ ಗರುಡ ಗಂಬದ ಮೇಲೆ ಸುಮಾರು 16ನೇ ಶತಮಾನದ ಮತ್ತೊಂದು ಶಾಸನವಿದ್ದು, ಶಾಸನಗಳಲ್ಲಿ ಈ ಗ್ರಾಮವನ್ನು ಬೆಳ್ಳಿಗುಂಬ ಎಂದು ಕರೆಯಲಾಗಿದ್ದು, ಕೈಲಾಸಕ್ಕೂ ಮಿಗಿಲೆಂದು ವರ್ಣಿಸಲಾಗಿದೆ ಎಂದು ವಿವರಿಸಿದರು.

ಬಿ.ಎಲ್.ರೈಸ್ ದಾಖಲಿಸಿರುವ ಈ ಶಾಸನಗಳು ನಾಪತ್ತೆಯಾಗಿವೆ. ಈ ಗ್ರಾಮದ ಕೆರೆಯ ಪಕ್ಕದಲ್ಲಿ 9 ಅಡಿ ಎತ್ತರವಿರುವ 4 ಅಡಿ ಅಗಲವಾಗಿರುವ 2 ಅಡಿ ದಪ್ಪನಾದ ಬೃಹತ್ ನಿಲುವು ಗಲ್ಲು ಪತ್ತೆಯಾಗಿವೆ. ಈ ನಿಲುವುಗಲ್ಲು ಪೂರ್ವ ಹಾಗು ಪಶ್ಚಿಮಾಭಿಮುಖವಾಗಿದೆ. ಈ ನಿಲುವುಗಲ್ಲಿನ ಪಕ್ಕದಲ್ಲಿಯೇ 6 ಅಡಿ ಅಗಲವಾದ ಮತ್ತು 6.3 ಅಡಿ ಉದ್ದವಾಗಿರುವ 2 ಅಡಿ ದಪ್ಪನಾದ ಒಂದು ದೈತ್ಯ ಆಸುಗಲ್ಲಿದೆ. ಇದು ಭೂಮಿಯಲ್ಲಿ ಮುಚ್ಚು ಹೋಗಿರುವಂತೆ ಕಾಣು ತ್ತಿದ್ದು, ಉತ್ಖನನ ಮಾಡಿದರೆ ಹೆಚ್ಚಿನ ಮಾಹಿತಿ ಲಭ್ಯವಾಗುತ್ತದೆ. ಈ ರೀತಿಯ ನಿಲುವುಗಲ್ಲುಗಳು ಅರಸೀಕೆರೆ ತಾಲ್ಲೂಕಿನ ಬಾಣಾವರ ಹೋಬಳಿಯಲ್ಲಿ ಹೆಚ್ಚು ಕಾಣಸಿಗುತ್ತವೆ. ಇವು ಮೂರು ಸಾವಿರ ವರ್ಷಗಳಷ್ಟು ಪುರಾತನವಾದ (ಮೆಗಾಲಿತಿಕ್) ಬೃಹತ್ ಶಿಲಾಯುಗದ ಸಮಾಧಿ ಸ್ಥಳಗಳಾಗಿವೆ ಎಂದು ತಿಳಿಸಿದರು.



ಬೆಳಗುಂಬ ಗ್ರಾಮದ ಪೂರ್ವ ದಿಕ್ಕಿನಲ್ಲಿ ಸಿದ್ದೇಶ್ವರ ಬೆಟ್ಟವಿದ್ದು ಆ ಭಾಗದಿಂದ ಸಣ್ಣ ನೀರಿನ ಸೆಲೆ ಹರಿದುಬರುತ್ತದೆ. ಈ ತೊರೆಗೆ ಅಡ್ಡಲಾಗಿ ಹೊಯ್ಸಳರ ಕಾಲದಲ್ಲಿ ಕೆರೆಯೊಂದನ್ನು ನಿರ್ಮಿಸಲಾಗಿದೆ. ಗವಿ ಸಿದ್ದೇಶ್ವರ ಬೆಟ್ಟದ ಭಾಗದಿಂದ ಹರಿದು ಬರುವ ಪುಟ್ಟ ತೊರೆ ಸದಾ ನೀರಿನಿಂದ ಕೂಡಿದ ಸ್ಥಳವಾಗಿದೆ. ಈ ತೊರೆಯನ್ನು ಅಜ್ಜನಹಳ್ಳಿ ಭಾಗದಲ್ಲಿ ರಾಮೇಶ್ವರ ವಜ್ರ ಎಂದು ಕರೆ ಯುತ್ತಾರೆ. ಸದಾ ನೀರಿರುವುದರಿಂದ ಜನರ ಮಾನಸದಲ್ಲಿ ಪುಣ್ಯ ಕ್ಷೇತ್ರವಾಗಿದೆ. ಈ ತೊರೆಯು ಶಿಲಾಯುಗದ ಜನರ ಬಾಯಾರಿಕೆ ನೀಗಿಸುತ್ತಿತ್ತು ಎಂಬ ಕುರುಹು ಇದ್ದು, ಬೆಳಗುಂಬ ಸಮೀಪದ ಗವಿಸಿದ್ದೇಶ್ವರ ಬೆಟ್ಟದ ಕಲ್ಲಾಸರೆಗಳು ಶಿಲಾಯುಗದ ಜನರ ವಾಸದ ನೆಲೆಯಾಗಿ ಆಶ್ರಯವಾಗಿದ್ದವು ಎಂದರು.

ಈ ಗ್ರಾಮದ ಪಶ್ಚಿಮ ಭಾಗದಲ್ಲಿ ಮತ್ತೆ ಕೆಲವು ನಿಲುವುಗಲ್ಲುಗಳಿದ್ದು ಅವುಗಳನ್ನು ರೈತರು ಅರಿವಿಲ್ಲದೆ ಕೃಷಿ ಚಟುವಟಿಕೆಗಳಿಗೆ ಅಡ್ಡಿಯಾಗುತ್ತವೆಂಬ ಕಾರಣಕ್ಕೆ ತೆರವುಗೊಳಿಸಿದರು ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಬೆಳಗುಂಬ ಗ್ರಾಮ ಮತ್ತು ಸುಮುತ್ತಲಿನ ಸ್ಥಳಗಳಲ್ಲಿ ಶಿಲಾಯುಗದ ಕುರುಹುಗಳಿದ್ದು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ, ಇತಿಹಾಸ ತಜ್ಞರು ಮತ್ತು ಸಂಶೋಧಕರಿಗೆ ಅಧ್ಯಯನ ಮಾಡಲು ಸವಾಲಿನ ಸ್ಥಳವಾಗಿದೆ ಎಂದರು.

### ಆದಿ ಮಾನವರ ವಾಸ ಸ್ಥಳ

ಕಲ್ಲಾಸರೆಗಳು ಹಾಗು ವರ್ಷಪೂರ್ತಿ ದೊರೆಯುವ ನೀರಿನ ತಾಣಗಳು ಇಲ್ಲಿರುವುದರಿಂದ ಈ ಪ್ರದೇಶ ಆದಿಮಾನವರಿಗೆ ವಾಸ ಮಾಡಲು ಯೋಗ್ಯವಾಗಿತ್ತು ಎಂದು ಹೇಳಬಹುದಾಗಿದೆ. ಗವಿ ಸಿದ್ದೇಶ್ವರ ಬೆಟ್ಟದ ಮೇಲೆ ವಿವಿಧ ಆಕೃತಿಯ ಶಿಲಾಯುಗದ ಜನರು ಬಳಸಿದ ಕೆಲವು ಕಲ್ಲಿನ ಆಯುಧಗಳನ್ನ ಕಾಣಬಹುದು. ಬೆಳಗುಂಬ ಗ್ರಾಮದ ಸುತ್ತಮುತ್ತಲಿರುವ ತಳಲುತೊರೆ, ಕೆಲ್ಲಂಗೆರೆ, ಆದಿಹಳ್ಳಿ ಗ್ರಾಮಗಳಲ್ಲಿಯೂ ಬೃಹತ್ ಶಿಲಾಯುಗ ಕಾಲದ ನಿಲುವುಗಲ್ಲುಗಳು ಪತ್ತೆಯಾಗಿದ್ದು, ಬೆಳಗುಂಬ ಗ್ರಾಮವು 3 ಸಾವಿರ ವರ್ಷಗಳಷ್ಟು ಪುರಾತನವಾದ ಕಾಲದಿಂದಲೂ ಜನವಸತಿಯ ಕೇಂದ್ರವಾಗಿತ್ತು ಎಂಬುದನ್ನು ಸ್ಪಷ್ಟ ಪಡಿಸಬಹುದೆಂದು ಮಾಹಿತಿ ನೀಡಿದರು.

# ಸರ್ಕಾರಿ ನೌಕರರು ಆರೋಗ್ಯ-ಕುಟುಂಬಕ್ಕೂ ಒತ್ತು ನೀಡಿ

» ಮೊದಲನೇ ಪುಟದಿಂದ

ಒಂದು ಅವಿಭಾಜ್ಯ ಅಂಗ. ಎಲ್ಲಾ ಸರ್ಕಾರಿ ನೌಕರರು ಕಾರ್ಯಕ್ರಮದಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಪ್ರತಿ ದಿನದ ಜಂಜಾಟ, ಒತ್ತಡ ಭರಿತ ಕೆಲಸದ ನಡುವೆ ಕಾರ್ಯನಿರ್ವಹಿಸುವ ಸರ್ಕಾರಿ ನೌಕರರಿಗೆ ಕ್ರೀಡಾ ಕೂಟಗಳು ಮಾನಸಿಕ ನೆಮ್ಮದಿ, ದೈಹಿಕ ಸಾಮರ್ಥ್ಯ ಹಾಗು ಸಕಾರಾತ್ಮಕ ಮನೋಭಾವವನ್ನು ಬೆಳೆಸಲು ಸಹಕಾರಿ. ಸರ್ಕಾರಿ ನೌಕರಿಯಾಗ ಬೇಕೆಂಬ ಕನಸಿನೊಂದಿಗೆ ಸಾಕಷ್ಟು ಶ್ರಮಪಟ್ಟು ನೌಕರಿಗೆ ಸೇರುವವರು, ನಂತರ ಅದನ್ನೇ ಒತ್ತಡದ ಬದುಕೆಂದು ಭಾವಿಸುವುದು ಸಾಮಾನ್ಯವಾಗಿದೆ. ಆದರೆ, ಯಾವುದೇ ಕೆಲಸವನ್ನು ಇಷ್ಟಪಟ್ಟು, ಮನಸ್ಸಿನಿಂದ ಮಾಡಿದಾಗ ಮಾತ್ರ ಆತ್ಮತೃಪ್ತಿ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರಿ ನೌಕರರ ಜೀವನದಲ್ಲಿ ಎದುರಾಗುವ ಅಸಮಾಧಾನ, ಸ್ಪರ್ಧಾತ್ಮಕ ಭಾವನೆಗಳನ್ನು ಇಂತಹ ಕ್ರೀಡಾ ಕೂಟಗಳಲ್ಲಿ ಸಕಾರಾತ್ಮಕವಾಗಿ ಹೊರ ಹಾಕುವ ಅವಕಾಶ ದೊರೆ ಯುತ್ತದೆ. ಕೆಲವೊಮ್ಮೆ ಒಬ್ಬರಿ ಗೊಬ್ಬರು ಮಾತು ಮಾತಿಗೆ ಬಾರದ ವರು ಕ್ರೀಡೆಯಲ್ಲಿ ಪರಸ್ಪರ ಸೋಲಿ ಸುವ ಮೂಲಕ ತಮ್ಮ ಸೇಡನ್ನು ತೀರಿಸಿ ಕೊಳ್ಳಬಹುದೆಂದು ಹಾಸ್ಯಭರಿತವಾಗಿ ಹೇಳಿ ನೌಕರರಲ್ಲಿ ನಗು ತರಿಸಿದರು.

ನಿರಂತವಾಗಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವವರು ಆರೋಗ್ಯವಾಗಿರುತ್ತಾರೆ. ಕ್ರೀಡೆಯಲ್ಲಿ ಎಂದಿಗೂ ಸಹ ವಯಸ್ಸಿನ ಭೇದ ಇರುವುದಿಲ್ಲ, ಎಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗ ವಹಿಸುವ ಮೂಲಕ ಒತ್ತಡವನ್ನು ಕಡಿಮೆ ಮಾಡಿಕೊಳ್ಳ ಬೇಕು. ಸಮಸ್ಯೆಗೆ ಪರಿಹಾರ ಕಂಡು ಕೊಳ್ಳಬಹುದು. ನೌಕರರು ತಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸಿ ಆರೋಗ್ಯದ ಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಕಾರ್ಯಾಂಗ ಹಾಗು ಶಾಸ ಕಾಂಗಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಜನಸೇವೆಗೆ ಆರೋಗ್ಯ ಅತ್ಯಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಇಂತಹ ಕ್ರೀಡಾ ಕೂಟಗಳು ಹೆಚ್ಚಾಗಿ ಆಯೋಜನೆಯಾಗಬೇಕು. ಅದರಲ್ಲಿಯೂ ಮಹಿಳಾ ಕ್ರೀಡಾಪಟುಗಳ ಹೆಚ್ಚಿನ ಭಾಗವಹಿಸುವಿಕೆ ಅತ್ಯಂತ ಸಂತೋಷ ತಂದಿದೆ ಎಂದು ಹೇಳಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಶಾಸಕಾಂಗ ಹಾಗೂ ಕಾರ್ಯಾಂಗ ಒಗ್ಗಟ್ಟಾಗಿ ಕೆಲಸವನ್ನು ಮಾಡಿದರೆ ರಾಜ್ಯ ಜನತೆಗೆ ಉತ್ತಮ ಆಡಳಿತವನ್ನು ನೀಡಲು ಸಾಧ್ಯ. ಪ್ರತಿಯೊಬ್ಬರೂ ಮಾಡುವ ಕೆಲಸವನ್ನು ಬಹಳ ಎಚ್ಚರಿಕೆಯಿಂದ, ಆತ್ಮವಿಶ್ವಾಸದಿಂದ, ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ, ಪತ್ರಕರ್ತ ರವಿನಾಕಲಗೂಡು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಆನಂದ್ ಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಎಚ್.ಎಲ್.ಮಲ್ಲೇಶಗೌಡ ಸೇರಿ ನೌಕರರ ಸಂಘದ ಪದಾಧಿಕಾರಿಗಳು, ಹಿರಿಯ ನೌಕರರು ಹಾಗು ಕ್ರೀಡಾಪಟುಗಳು ಉಪಸ್ಥಿತರಿದ್ದರು.

# ವಿದ್ಯುತ್ ವ್ಯತ್ಯಯ

**ಹೊಳೆನರಸೀಪುರ:** ಪಟ್ಟಣದ ನೋಡಲ್ ಕೇಂದ್ರ ವ್ಯಾಪ್ತಿಯ ಸೋಮನಹಳ್ಳಿ ಮತ್ತು ಹರದನಹಳ್ಳಿ ಯಲ್ಲಿ ಜ.22 ರಂದು ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ನಾಲ್ಕನೇ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಹೊಳೆನರಸೀಪುರ ಶಾಖಾ ವ್ಯಾಪ್ತಿಯ ಗ್ರಾಮಗಳಾದ ಹೊಳೆನರಸೀಪುರ ಟೌನ್, ಅಮಾನಿಕೆರೆ, ಆಲಗೌಡನಹಳ್ಳಿ, ಮಲ್ಲಪ್ಪನಹಳ್ಳಿ, ವಾಟರ್‌ಸಪ್ಲೆ, ಮೆಣಗನಹಳ್ಳಿ, ಕೆ.ಹೆಚ್.ಬಿ.ಕಾಲೋನಿ, ಚಿಟ್ಟನಹಳ್ಳಿ, ಗಾಳಿಪುರ, ಐಚನಹಳ್ಳಿ ಹಾಗೂ ಹಳ್ಳಿಮೈಸೂರು ಶಾಖಾ ವ್ಯಾಪ್ತಿಯ ಗ್ರಾಮಗಳಾದ ಸೋಮನ ಹಳ್ಳಿ, ಕುಪ್ಪೆ, ನಿಡುವಣಿ, ಬಿದರಕ್ಕ, ನೇರಳೆ ಮತ್ತು ಹರದನಹಳ್ಳಿ ಶಾಖಾ ವ್ಯಾಪ್ತಿಯ ಗ್ರಾಮಗಳಾದ ಕಾಳೇನ ಹಳ್ಳಿ, ಬೆಟ್ಟಹಳ್ಳಿ, ಮನುಗನಹಳ್ಳಿ, ಶೀಗ ವಾಳು, ಕೇರಳಾಪುರ ಹಾಗು ಸುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಶೀಘ್ರ ದಕ್ಷಿಣ ಭಾರತ ಸಿಎಂಗಳ ಸಮ್ಮೇಳನ

» ಮೊದಲನೇ ಪುಟದಿಂದ

ಒಕ್ಕೂಟದ ಸ್ವಾಯತ್ತತೆಯನ್ನು ಸಮತೋಲನಗೊಳಿಸುವ ಸಂವಿಧಾನವನ್ನು ಅಳವಡಿಸಿಕೊಂಡಿತು. ಹಿಂದಿನ ಕಾಂಗ್ರೆಸ್ ಸರ್ಕಾರಗಳು ಹಣಕಾಸು ಆಯೋಗವನ್ನು ಸ್ವತಂತ್ರ ಸಂಸ್ಥೆಯಾಗಿ ಗೌರವಿಸಿದ್ದವು. ಯೋಜನಾ ಆಯೋಗದಂತಹ ಸಂಸ್ಥೆಗಳನ್ನು ರಾಜ್ಯಗಳೊಂದಿಗೆ ಸಹಕರಿಸಲು ವೇದಿಕೆಯನ್ನಾಗಿ ಬಳಸಲಾಗಿತ್ತು. ಭೂ ಸುಧಾರಣೆ, ಸಾರ್ವಜನಿಕ ವಿತರಣೆ, ನೀರಾವರಿ, ಶಿಕ್ಷಣ ಮತ್ತು ಆರೋಗ್ಯದಂತಹ ಪ್ರಮುಖ ಯೋಜನೆಗಳನ್ನು ರಾಜ್ಯಗಳ ಮೂಲಕವೇ ಜಾರಿಗೆ ತರಲಾಯಿತು. ಯುಪಿಎ ಅವಧಿಯಲ್ಲಿ ಉದ್ಯೋಗ ಖಾತರಿ, ಆಹಾರ ಭದ್ರತೆ ಮತ್ತು ಮಾಹಿತಿ ಹಕ್ಕಿನಂತಹ ಕಾನೂನುಗಳ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಾಯಿತು ಎಂದು ವಿವರಿಸಿದರು.

# ಸರ್ಕಾರದ ನೀತಿಯಿಂದ ಸಂವಿಧಾನಾತ್ಮಕ ಹಕ್ಕು ದುರ್ಬಲ

» ಮೊದಲನೇ ಪುಟದಿಂದ

ಹೋರಾಡಿದರು. ಅನ್ಯಾಯ, ಅಸ್ಪೃಶ್ಯತೆ ಮತ್ತು ದೌರ್ಜನ್ಯಗಳನ್ನು ಅನುಭವಿಸುತ್ತಿದ್ದ ತುಳಿತಕ್ಕೆ ಒಳಗಾದ ಸಮುದಾಯಗಳು ಈ ಯುದ್ಧದಲ್ಲಿ ಒಟ್ಟಾಗಿ ನಿಂತವು. ಮಹಾರ್ ಸಮುದಾಯದವರು ಸಹಜವಾಗಿಯೇ ಯೋಧರೇ ಆಗಿದ್ದರು. ಮರಾಠ ಸೇನೆಯಲ್ಲಿಯೂ ಮಹಾರ್ ಸೈನಿಕರು ಇದ್ದರು. ಛತ್ರಪತಿ ಶಿವಾಜಿ ಮಹಾರಾಜರ ಕಾಲದಲ್ಲಿಯೂ ಮಹಾರ್ ಸಮುದಾಯದ ಯೋಧರು ಸೇನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಭೀಮಾ ಕೋರೆಗಾಂವ್ ಯುದ್ಧದಲ್ಲಿ ಪ್ರಾಣ ತ್ಯಾಗ ಮಾಡಿದ ಯೋಧರ ಹೆಸರುಗಳು ಇಂದಿಗೂ ಸ್ಮಾರಕದಲ್ಲಿ ಕೆತ್ತಲ್ಪಟ್ಟಿವೆ ಎಂದು ತಿಳಿಸಿದರು.



ಬ್ರಿಟೀಷರು ಮಹಾರ್ ಸಮುದಾಯವನ್ನು ಮಾರ್ಷಿಯಲ್ ರೇಸ್ (ಯೋಧ ಸಮುದಾಯ) ಎಂದು ಅಧಿಕೃತವಾಗಿ ಗುರುತಿಸಿದ್ದರು. ಭಾರತದಲ್ಲಿ ಇಂತಹ ಗುರುತಿನ ಪಡೆದ ಎರಡು ಸಮುದಾಯಗಳಲ್ಲಿ ಮಹಾರಾಷ್ಟ್ರದ ಮಹಾರ್ ಸಮುದಾಯ ಮತ್ತು ಪಂಜಾಬ್‌ನ ಮತ್ತೊಂದು ಸಮುದಾಯ ಪ್ರಮುಖವಾಗಿವೆ. ಈ ಇತಿಹಾಸವನ್ನು ಸಮಾಜಕ್ಕೆ ಈ ಇತಿಹಾಸವನ್ನು ದೇಶದ ಜನತೆಗೆ ಪರಿಚಯಿಸಿದವರು ಡಾ. ಬಿ.ಆರ್. ಅಂಬೇಡ್ಕರ್. 1927ರಲ್ಲಿ ಮೊದಲ ಬಾರಿಗೆ ಅವರು ಭೀಮಾ ಕೋರೆಗಾಂವ್ ವಿಜಯೋತ್ಸವಕ್ಕೆ ಭೇಟಿ ನೀಡಿ, ಈ ಹೋರಾಟದ ಮಹತ್ವವನ್ನು ದೇಶದ ಮುಂದೆ ತಂದರು ಎಂದು ಸ್ಮರಿಸಿದರು.

ಅಂಬೇಡ್ಕರ್ ಲಂಡನ್ ಹಾಗು ಬಾಂಬೆಗಳಲ್ಲಿ ವಿದ್ಯಾಭ್ಯಾಸ ಮಾಡಿ, ಪಿಹೆಚ್‌ಡಿ ಪೂರ್ಣಗೊಳಿಸಿದ ಬಳಿಕ, ಬ್ರಿಟೀಷ್ ಲೈಬ್ರರಿಗಳಲ್ಲಿ ಸಂಗ್ರಹಿಸಿದ್ದ ದಾಖಲೆಗಳನ್ನು ಅಧ್ಯಯನ ಮಾಡಿ, ಈ ಇತಿಹಾಸವನ್ನು ಸಮಾಜಕ್ಕೆ ಪರಿಚಯಿಸಿದರು. ಅದಕ್ಕೂ ಮೊದಲು ಈ ಸತ್ಯ ಬಹುತೇಕ ಜನರಿಗೆ ಗೊತ್ತಿರಲಿಲ್ಲ. ಇಂದಿಗೂ ಈ ಹೋರಾಟ ಮುಂದುವರಿದಿದೆ. ಈಗ ಅದು ಯುದ್ಧಭೂಮಿಯಲ್ಲಿ ಅಲ್ಲ, ಸಮಾಜದ ಒಳಗೆ ನಡೆಯುತ್ತಿದೆ. ಗೌರವಕ್ಕಾಗಿ, ಹಕ್ಕುಗಳಿಗಾಗಿ, ಸಂವಿಧಾನದ ಅನುಷ್ಠಾನಕ್ಕಾಗಿ ನಡೆಯುತ್ತಿರುವ ಹೋರಾಟ ಇದಾಗಿದೆ ಎಂದು ಹೇಳಿದರು.

**ಬೌದ್ಧ ಮಹಾಸಭಾ ಅಂಬೇಡ್ಕರ್ ಕಟ್ಟಿದ ಸಂಘಟನೆ**

ನಿವೃತ್ತ ಡಿಸಿಪಿ, ಭಾರತೀಯ ಬೌದ್ಧ ಮಹಾಸಭಾ ಅಧ್ಯಕ್ಷ ಸಿದ್ದರಾಜು ಅವರು ಮಾತನಾಡಿ, ಬೌದ್ಧ ಮಹಾಸಭಾ ಸ್ವತಃ ಅಂಬೇಡ್ಕರ್ ಅವರು ಕಟ್ಟಿದ ಸಂಘಟನೆಯಾಗಿದೆ. 1934 ರಲ್ಲಿ ನಾಸಿಕ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹುಟ್ಟು ಆಕಸ್ಮಿಕ, ಸಾವು ಖಚಿತ. ಆದರೆ, ಸಾಯುವಾಗ ಹಿಂದೂವಾಗಿ ಸಾಯಲಾರೆನೆಂಬ ಮಾತನ್ನು ಹೇಳುವ ಮೂಲಕ ಬೌದ್ಧ ಧರ್ಮದ ಸಂಸ್ಕೃತಿಯನ್ನು ಎತ್ತಿ ಹಿಡಿದಿದ್ದಾರೆ. ಜಾತಿ ಹೆಸರಿನಲ್ಲಿ ಮನುಕುಲ ನಾಶ ಮಾಡಿದ ಪೇಶ್ವೆಯವರ ವಿರುದ್ಧ 500 ಮಹಾರ್ ಯೋಧರ ಸಾಧನೆಯ ಫಲವೇ ಈ ವಿಜಯೋತ್ಸವ. ಅಂಬೇಡ್ಕರ್ ಆಲೋಚನೆಯಂತೆ ವಿಶ್ವಕ್ಕೆ ಶಾಂತಿ ಸಂದೇಶ ಸಾರುವ ಬೌದ್ಧ ಧರ್ಮದ ಬಗ್ಗೆ ಮಾತನಾಡುವ ಜನಪ್ರತಿನಿಧಿಗಳು ಬುದ್ಧ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವಾಗಿ ಆಚರಣೆ ಮಾಡಲು ವಿಳಂಬ ಮಾಡಿ ಕಳೆದ ವರ್ಷದಿಂದ ಸರ್ಕಾರಿ ಕಾರ್ಯಕ್ರಮವಾಗಿ ಆಚರಣೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಮನೋಹರಕಿತ ಬಂತೇಜಿ, ವೀರಶೀಲ ಬಂತೇ, ಭಾರತೀಯ ಬೌದ್ಧ ಮಹಾಸಭಾದ ಸಂಘಟಕ ಮಲ್ಲಿಕಾರ್ಜುನ ಬಾಲ್ಕಿ, ಉತ್ತರ ಕರ್ನಾಟಕ ಶಾಖೆ ರಾಜ್ಯಾಧ್ಯಕ್ಷ ಮನೋಹರ್ ಮೋರೆ, ಮಹಿಳಾ ಶಾಖೆಯ ಅಧ್ಯಕ್ಷರಾದ ಮಂಗಳ ದೊಡ್ಡಮನಿ, ಭೀಮ ಕೋರೆಗಾಂವ್ ಸಮಿತಿ ಅಧ್ಯಕ್ಷ ಹೆಚ್.ಕೆ.ಸಂದೇಶ್, ಉಪಾಧ್ಯಕ್ಷೆ ಶಿವಮ್ಮ, ಭಾಗ್ಯ ಕಲಿವೀರ್, ಅಂಬುಗ ಮಲ್ಲೇಶ್, ನಾಗರಾಜು ಹೆತ್ತೂರು, ಮಂಜು ತೇಜೂರು, ವೆಂಕಟೇಶ್ ಬ್ಯಾಕರವಳ್ಳಿ, ರಾಜು ಗೊರೂರು, ರಾಜಶೇಖರ ಇದ್ದರು.

**ನಗರದಲ್ಲಿ ವಿಜಯೋತ್ಸವ ಮೆರವಣಿಗೆ**

ನಗರದಲ್ಲಿ ಇದೇ ಮೊದಲ ಬಾರಿಗೆ ನಡೆದ ಭೀಮ ಕೋರೆಗಾಂವ್ ವಿಜಯೋತ್ಸವದಲ್ಲಿ ಅಂಬೇಡ್ಕರ್ ಅವರ ಮೊಮ್ಮಗ ಭೀಮರಾವ್ ಅಂಬೇಡ್ಕರ್ ಅವರು ಭಾಗವಹಿಸಿ ಮೆರವಣಿಗೆಗೆ ಮೆರುಗು ನೀಡಿದರು. ನಗರದ ರೈಲ್ವೆ ನಿಲ್ದಾಣದಿಂದ ಆರಂಭವಾದ ಬೃಹತ್ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಭಾಗಿಯಾಗಿದ್ದರು. ಮೆರವಣಿಗೆ ಉದ್ದಕ್ಕೂ ನೀಲಿ ಬಾವುಟ ರಾರಾಜಿಸಿದವು. ಡಿಜೆಯಲ್ಲಿ ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಕುರಿತಾದ ಕ್ರಾಂತಿ ಗೀತೆಗಳು ಮೊಳಗಿದವು.

# ಸಣ್ಣಸ್ವಾಮಿ ಮೇಲೆ ಮುರುಳಿ ಮೋಹನ್ ಹಲ್ಲೆ ಖಂಡನೀಯ

## ಕಾಂಗ್ರೆಸ್ ಪಕ್ಷದಿಂದ ಉಚ್ಛಾಟನೆಗೆ ಕುಮಾರಶೆಟ್ಟಿ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಕಾಂಗ್ರೆಸ್ ಮುಖಂಡರು, ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಡಿ.ಸಿ.ಸಣ್ಣಸ್ವಾಮಿ ಅವರ ಮೇಲೆ ಆಲೂರು-ಸಕಲೇಶಪುರ ವಿಧಾನಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಮುರುಳಿ ಮೋಹನ್ ಹಲ್ಲೆ ಮಾಡಿರುವುದು ಖಂಡನೀಯವೆಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಕಾರ್ಯದರ್ಶಿ ಕುಮಾರಶೆಟ್ಟಿ ಅವರು ಹೇಳಿದರು.




ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.16 ರಂದು ಜಿಲ್ಲಾ ಉಸ್ತುವಾರಿ ಸಚಿವರು ಸಕಲೇಶಪುರದಲ್ಲಿ ಜನ ಸ್ಪಂದನಾ ಸಭೆ ನಂತರ, ಅಧಿಕಾರಿಗಳ ಸಭೆ ನಡೆಸಲು ಹೋಗುತ್ತಿದ್ದಾಗ ಸಣ್ಣಸ್ವಾಮಿ ಅವರು ಕ್ಷೇತ್ರದ ವಿವಿಧ ಸಮಸ್ಯೆಗಳ ನಿವಾರಣೆ ಸಂಬಂಧ ಮನವಿ ಸಲ್ಲಿಸಲು ಹೋದಾಗ, ಮುರುಳಿ ಮೋಹನ್ ದರ್ಪ ತೋರಿದ್ದಾರೆ. ಗೇಟಿನ ಮುಂಭಾಗ ತಡೆದು ಏಕ ವಚನದಿಂದ ನಿಂದಿಸಿ, ಹಲ್ಲೆ ಮಾಡಿ ಬಟ್ಟೆ ಹರಿದಿದ್ದಾರೆ. ಅಷ್ಟೇ ಅಲ್ಲದೆ ಸಣ್ಣಸ್ವಾಮಿ ಅವರನ್ನು ಎಳೆದಾಡಿ ಅವರನ್ನು ಒಳಗಡೆ ಬಿಡಬೇಡಿ ಎಂದು ಪೊಲೀಸರಿಗೆ ಹೇಳಿ ಹೊರ ಹಾಕಿದ್ದು ಖಂಡನೀಯವೆಂದು ಆರೋಪಿಸಿದರು.

ಹೊರಗಿನಿಂದ ಬಂದು ಸ್ಥಳೀಯ ಹಿರಿಯ ಮುಖಂಡರ ಮೇಲೆ ಕೈ ಮಾಡಿದ ಮುರುಳಿ ಮೋಹನ್ ಅವರನ್ನು ಕೂಡಲೇ ಪಕ್ಷದಿಂದ ಹೊರ ಹಾಕಬೇಕು. ಹಲ್ಲೆ ಮಾಡಿರುವ ಮುರುಳಿ ಮೋಹನ್ ಅವರನ್ನು ಬಂಧಿಸಬೇಕು. ಮುಂದಿನ ಚುನಾವಣೆಯಲ್ಲಿ ಮುರುಳಿ ಮೋಹನ್‌ಗೆ ಟಿಕೆಟ್ ಕೊಡಬಾರದು. ಅಕಸ್ಮಾತ್ ನೀಡಿದರೆ ಸೋಲು ಖಚಿತ. ಒಬ್ಬ ಮುಖಂಡರ ಮೇಲೆ ಹಲ್ಲೆ ಮಾಡಿರುವ ಮುರುಳಿ ಮೋಹನ್ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಶೀಘ್ರವೇ ಬೆಂಗಳೂರಿಗೆ ನಿಯೋಗ ತೆರಳಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ದೂರು ನೀಡುವುದಾಗಿ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಮಲ್ಲಿಗೆವಾಳು ದ್ಯಾವಪ್ಪ, ಮುಖಂಡರಾದ ಅಶೋಕ್ ನಾಯಕರಹಳ್ಳಿ, ವೆಂಕಟೇಶ್, ಮಣಿಕಂಠಸ್ವಾಮಿ ಇದ್ದರು.

# ಕಲ್ಲೋಡೆಬೋರೆ ಕಾವಲಿನಲ್ಲಿ ಗಣಿಗಾರಿಕೆ ಅನುಮತಿಗೆ ವಿರೋಧ

» ಮೊದಲನೇ ಪುಟದಿಂದ

ಹಾಗು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಸ್ಪಷ್ಟ ದಾಖಲೆಗಳಿಲ್ಲದೆ ನಾಲ್ವರಿಗೆ ಗಣಿಗಾರಿಕೆ ಪರವಾನಗಿ ನೀಡಿರುವುದು ಅನುಮಾನಾಸ್ಪದವಾಗಿದ್ದು, ಸರ್ಕಾರಿ ಜಾಗದಲ್ಲಿ ಯಾವ ಆಧಾರದ ಮೇಲೆ ಅನುಮತಿ ನೀಡಲಾಗಿದೆ ಎಂದು ಗ್ರಾಮಸ್ಥರು ಪ್ರಶ್ನಿಸಿದರು.

2016ರಿಂದಲೇ ನಾಲ್ವರಿಗೆ ಗಣಿಗಾರಿಕೆ ಅನುಮತಿ ನೀಡಲಾಗಿದ್ದು, ಅವರ ವಿರುದ್ಧ ಪ್ರಶ್ನೆ ಎತ್ತಿದ ಗ್ರಾಮಸ್ಥರ ಮೇಲೆ ಗಣಿಗಾರಿಕೆ ನಡೆಸುವವರು ರೌಡಿಗಳಂತೆ ವರ್ತಿಸಿ ದೌರ್ಜನ್ಯ ಎಸಗುತ್ತಿದ್ದಾರೆಂಬ ಆರೋಪವೂ ಕೇಳಿ ಬಂತು. ಈ ಕುರಿತು ಅಧಿಕಾರಿಗಳನ್ನು ಪ್ರಶ್ನಿಸಿದರೆ ಅವರು ಉಡಾಫೆ ಧೋರಣೆ ತೋರುತ್ತಿದ್ದಾರೆ. ಈ ಪ್ರದೇಶದಲ್ಲಿ ರಂಗೇನಹಳ್ಳಿ ಹಾಗೂ ಗುಡ್ಡೇನಹಳ್ಳಿ ಏತ ನೀರಾವರಿ ಯೋಜನೆಗಳು ಕಾರ್ಯನಿರ್ವಹಿಸುತ್ತಿದ್ದರೂ, ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ. ಇದರಿಂದ ಕೃಷಿ, ಕುಡಿಯುವ ನೀರು ಹಾಗೂ ಜನ ಜೀವನದ ಮೇಲೆ ಗಂಭೀರ ಪರಿ ಣಾಮ ಬೀರುತ್ತಿದೆ ಎಂದು ಹೇಳಿದರು.

ಕಂದಾಯ ಹಾಗೂ ಗಣಿ ಇಲಾಖೆ ಅಧಿಕಾರಿಗಳು ರೈತರಿಗೆ ಅಗತ್ಯ ದಾಖಲೆಗಳನ್ನು ಸರಿಯಾಗಿ ನೀಡದೆ, ಹಣ ಉಳ್ಳವರಿಗೆ ಮಾತ್ರ ರಾತ್ರೋರಾತ್ರಿ ಸರ್ವೆ ನಡೆಸಿ ಜಾಗ ಗುರುತು ಮಾಡಿಕೊಡುತ್ತಿದ್ದಾರೆ. ನಿಗದಿ ಪಡಿಸಿದ ಗಡಿಗಿಂತ ಹೆಚ್ಚು ವಿಸ್ತಾರದಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದರೂ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಈ ಕುರಿತು ಹಲವಾರು ಬಾರಿ ಮನವಿ ನೀಡಿದರೂ ಕ್ರಮ ಕೈಗೊಂಡಿಲ್ಲ, ಈ ಪರಿಸ್ಥಿತಿ ಮುಂದುವರಿದರೆ, ಆಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಳ್ಳುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದರು.

ಹಳ್ಳಿ ಮೈಸೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ವಿರಾಜೇಗೌಡ, ಗ್ರಾಮಸ್ಥರಾದ ಮಂಜೇಗೌಡ, ಶ್ರೀನಿವಾಸ್, ಚಂದ್ರಶೇಖರ್, ಮಂಜೇಗೌಡ, ಪುಟ್ಟೇಗೌಡ ಸೇರಿ ಹಲವರು ಭಾಗವಹಿಸಿದ್ದರು.

# ಸಮಾಜಕ್ಕೆ ಸತ್ಪ್ರಜೆಗಳ ನೀಡುವ ಶಕ್ತಿ ಶಿಕ್ಷಣಕ್ಕಿದೆ

• ಪ್ರಜೋದಯ ವರದಿ

**ಜಾವಗಲ್:** ಸಮಾಜವನ್ನು ತಿದ್ದಿ ತೀಡುವ ವಿದ್ಯಾವಂತ ಸತ್ಪ್ರಜೆಗಳನ್ನು ನೀಡುವ ಶಕ್ತಿ ಶಿಕ್ಷಣಕ್ಕಿದೆ ಎಂದು ಶಾಸಕ ಹೆಚ್.ಕೆ.ಸುರೇಶ್ ಅವರು ಅಭಿಪ್ರಾಯಪಟ್ಟರು.




ಪಟ್ಟಣದ ಮಾಡೆಲ್ ಆಂಗ್ಲ ಪ್ರೌಢ ಶಾಲೆಯ ಮಾಡೆಲ್ ವರ್ಷದ ಹರ್ಷ 2025-26 ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಮನುಷ್ಯನಿಗೆ ಶಿಕ್ಷಣ, ಆರೋಗ್ಯ, ಕೃಷಿ ಈ ಮೂರು ಅಂಶಗಳು ಅತ್ಯವಶ್ಯಕವಾಗಿದೆ. ಮಕ್ಕಳ ಶಿಕ್ಷಣದ ಪ್ರಗತಿಗೆ ಶಿಕ್ಷಕರಷ್ಟೇ ಪ್ರಾಮುಖ್ಯತೆ ನೀಡುವುದು ಪೋಷಕರ ಗುರುತರ ಜವಾಬ್ದಾರಿಯಾಗಿದೆ ಎಂದರು.

ಚಿಕ್ಕಮಗಳೂರು ಶಾಸಕ ಹೆಚ್.ಡಿ. ತಮ್ಮಯ್ಯ ಅವರು, ಕಳೆದ ಸಾಲಿನ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿ ಮಾತನಾಡಿ, ಶಾಲಾ ವಾರ್ಷಿಕೋತ್ಸವವೂ ಶಾಲಾ ಪ್ರಗತಿಯ ಕೈಗನ್ನಡಿ ಇದ್ದಂತೆ. ಮಕ್ಕಳಲ್ಲಿನ ನೈಜ ಪ್ರತಿಭೆಯನ್ನು ಶಿಕ್ಷಕರು, ಪೋಷಕರು ಗುರುತಿಸಿ ಪ್ರೋತ್ಸಾಹಿಸಬೇಕು. ಜಾಗತಿಕ ಪ್ರಪಂಚದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಪೈಪೋಟಿ ಹೆಚ್ಚಾಗಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳು ಅನಿವಾರ್ಯವಾಗಿದ್ದು ಪೋಷಕರು, ಶಿಕ್ಷಕರು ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಣಿಗೊಳಿಸುವಂತೆ ಸಲಹೆ ನೀಡಿದರು.

ಮಾನಸಿಕ ಆರೋಗ್ಯ ತಜ್ಞ ಡಾ. ಟಿ.ಎಸ್.ಚಂದ್ರಶೇಖರ್, ತುರುವೇಕೆರೆ ಇಂಡಿಯನ್ ಪಬ್ಲಿಕ್ ಸ್ಕೂಲ್‌ನ ಅಧ್ಯಕ್ಷ ಡಾ.ರುದ್ರಯ್ಯ ಹಿರೇಮಠ್, ಬೆಂಗಳೂರು ಬಸವ ಸಮಿತಿ ಅಧ್ಯಕ್ಷ ಸಿ.ಎಂ.ರಾಜಶೇಖರಯ್ಯ, ಉದ್ಯಮಿ ಜಗದೀಶ್, ಶಿಕ್ಷಕರಾದ ರಾಜೇಶ್ವರಿ, ದೃಷ್ಟಿ, ಕಾವ್ಯ, ವಿನುತ, ಆಶಾ, ಅಧ್ಯಕ್ಷ ಬಿ. ಮಹಾಲಿಂಗಸ್ವಾಮಿ, ಮುಖ್ಯ ಶಿಕ್ಷಕ ಪ್ರಸನ್ನ ಕುಮಾರ್ ಇದ್ದರು.

# ಬಿಜೆಪಿಯ ಅವಧಿಯಲ್ಲಿ 458.6 ಕೋಟಿ ವಸೂಲಿ

• ಪ್ರಜೋದಯ ವರದಿ


**ಬೆಂಗಳೂರು:** ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತವಿದ್ದ 2020-21, 2022-23ರ ಅವಧಿಯಲ್ಲಿ 15ನೇ ಹಣಕಾಸು ಆಯೋಗದ ಅನುದಾನದಲ್ಲಿ 653.25 ಕೋಟಿ ಮೊತ್ತಕ್ಕೆ ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪ ವ್ಯಕ್ತವಾಗಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ 458.6 ಕೋಟಿ ವಸೂಲಾತಿ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತದಲ್ಲಿ ಕಮಿಷನ್ ಪಿಡುಗಿನಿಂದ ಗ್ರಾಮೀಣಾಭಿವೃದ್ಧಿ ಸಚಿವರೊಬ್ಬರು ರಾಜೀನಾಮೆ ನೀಡಿದ್ದರು. ನಂತರ ಸಚಿವರಿಲ್ಲದ ಇಲಾಖೆಯ ವ್ಯವಸ್ಥೆಯನ್ನು ಹಳ್ಳ ಹಿಡಿಸಲಾಗಿತ್ತು. ಬಿಜೆಪಿ ಮಾಡಿದ್ದ ಅವಾಂತರ ಸರಿಪಡಿಸುವ ಕೆಲಸವನ್ನು ಈಗಿನ ಸರ್ಕಾರ ಮಾಡುತ್ತಿದೆ ಎಂದಿದ್ದಾರೆ.

15ನೇ ಹಣಕಾಸು ಆಯೋಗದ ಅನುದಾನದಲ್ಲಿ ಶೇ.90ರಷ್ಟು ಜನಸಂಖ್ಯೆಯ ಆಧಾರದಲ್ಲಿ, ಶೇ.10ರಷ್ಟನ್ನು ಭೌಗೋಳಿಕ ಆಧಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ ಬಿಡುಗಡೆ ಮಾಡಲಾಗುತ್ತದೆ. ಒಟ್ಟು ಅನುದಾನದಲ್ಲಿ ಶೇ.60ರಷ್ಟು ನಿರ್ಬಂಧಿತ, ಶೇ.40ರಷ್ಟನ್ನು ಅನಿರ್ಬಂಧಿತ ಅನುದಾನವಾಗಿ ಬಿಡುಗಡೆ ಮಾಡಲಾಗುತ್ತದೆ. ಗ್ರಾಮ ಸಭೆ ನಡೆಸಿ, ಈ ಅನುದಾನ ಬಳಕೆಗೆ ಕ್ರಿಯಾ ಯೋಜನೆ ತಯಾರಿಸಿಕೊಂಡು ಅವರ ಹಂತದಲ್ಲೇ ಕಾಮಗಾರಿ ಮಾಡಲಾಗುತ್ತದೆ. ಕ್ರಿಯಾ ಯೋಜನೆ ಮತ್ತು ಅನುಷ್ಠಾನದ ಮಾಹಿತಿ ಯನ್ನು ಇ-ಗ್ರಾಮ್ ಸ್ವರಾಜ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗುತ್ತದೆ. ಸರ್ಕಾರದಿಂದ ಪ್ರತ್ಯೇಕ ಅನುಮೋದನೆ ಪಡೆಯುವ ಅಗತ್ಯ ಇಲ್ಲ. ಬಿಜೆಪಿಯ ಕೆಲವರಿಗೆ ಈ ಕುರಿತು ಸಾಮಾನ್ಯ ಜ್ಞಾನವೂ ಇಲ್ಲ ಎಂದು ಟೀಕಿಸಿದ್ದಾರೆ.

# ಗೌತಮ್ ಕೋಚ್: ಗಂಭೀರ ಸ್ಥಿತಿಯಲ್ಲಿ ಟೀಂ ಇಂಡಿಯಾ

• ಪ್ರಜೋದಯ ವರದಿ



**ನವದೆಹಲಿ:** ಭಾರತದಲ್ಲಿ ಬೇರೆ ಕ್ರೀಡೆಗಳಿಗೆ ಹೋಲಿಸಿದರೆ ಕ್ರಿಕೆಟ್‌ಗೆ ವಿಶೇಷ ಸ್ಥಾನಮಾನ ನೀಡಲಾಗಿದೆ. ಇದನ್ನು ಒಂದು ಹಬ್ಬದಂತೆ ಸಂಭ್ರಮಿಸುತ್ತಾರೆ. 2023ರ ಟಿ-20 ವಿಶ್ವಕಪ್‌ವರೆಗೆ ಭಾರತ ಕ್ರಿಕೆಟ್ ತಂಡಕ್ಕೆ ಕನ್ನಡಿಗ ರಾಹುಲ್ ದ್ರಾವಿಡ್ ಅವರು ಮುಖ್ಯ ತರಬೇತು ದಾರರಾಗಿದ್ದರು. ಅದಾದ ಬಳಿಕ ಗೌತಮ್ ಗಂಭೀರ್ ಕೋಚ್ ಆಗಿ ಅಧಿಕಾರ ವಹಿಸಿಕೊಂಡರು. ಗೌತಮ್ ಗಂಭೀರ್ ಅವರು ಭಾರತ ಕ್ರಿಕೆಟ್ ತಂಡದ ಮುಖ್ಯ ತರಬೇತುದಾರರಾದ ಬಳಿಕ ಐಸಿಸಿ ಚಾಂಪಿಯನ್ಸ್ ಟ್ರೋಫಿ ಹಾಗೂ ಏಷ್ಯಾ ಕಪ್‌ಗಳಲ್ಲಿ ಗೆದ್ದಿರುವುದನ್ನು ಹೊರತುಪಡಿಸಿದರೆ, ಹೇಳಿಕೊಳ್ಳುವಂತ ಪ್ರದರ್ಶನ ತೋರಿಲ್ಲ. ಬದಲಾಗಿ, ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡ ಶೋಚನೀಯ ಸ್ಥಿತಿಗೆ ತಲುಪಿದೆ.

# ಶಾಲಾ ಬಾಲಕಿ ಹಿಂಬಾಲಿಸಿದ ಪುಂಡ: ಆತಂಕ

• ಪ್ರಜೋದಯ ವರದಿ

**ಹಾಸನ:** ಶಾಲೆಯಿಂದ ಮನೆಗೆ ತೆರಳುತ್ತಿದ್ದ ಅಪ್ರಾಪ್ತ ಬಾಲಕಿಯನ್ನು ಪುಂಡನೊಬ್ಬ ಹಿಂಬಾಲಿಸಿಕೊಂಡು ಬಂದ ಹಿನ್ನಲೆ ಹೆದರಿದ ಬಾಲಕಿ ಓಡೋಡಿ ಮನೆಗೆ ತೆರಳಿ ಗೇಟ್ ಲಾಕ್ ಮಾಡಿಕೊಂಡು ತನ್ನನ್ನು ತಾನು ರಕ್ಷಿಸಿಕೊಂಡ ಘಟನೆ ನಗರದ 80 ಅಡಿ ರಸ್ತೆಯಲ್ಲಿ ನಡೆದಿದೆ.



ಶಾಲೆಯಿಂದ ವಾಪಾಸಾಗುತ್ತಿದ್ದ ವೇಳೆ ಅಪರಿಚಿತ ಬಾಲಕಿಯನ್ನು ಹಿಂಬಾಲಿಸಿಕೊಂಡು ಬಂದಿದ್ದಾನೆ. ಅದನ್ನು ಗಮನಿಸಿದ ಬಾಲಕಿ ಭಯದಿಂದ ಕೂಗಿ ಸಹಾಯ ಕೋರಿದ್ದಾಳೆ. ಈ ವೇಳೆ ದುರುಳ ಮನೆಯ ಗೇಟ್‌ವರೆಗೂ ಬಂದು ಒಳಗೆ ಇಣುಕಿ ನೋಡಿದ್ದು, ಕೆಲ ನಿಮಿಷಗಳ ಕಾಲ ಗೇಟ್ ಮುಂದೆ ಹೊಂಚು ಹಾಕಿ ನಿಂತಿದ್ದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಘಟನೆ ವೇಳೆ ಅಪರಿಚಿತ ವ್ಯಕ್ತಿ ಜರ್ಕಿನ್ ಹಾಗು ಟೋಪಿ ಧರಿಸಿದ್ದನು ಎಂದು ಬಾಲಕಿ ತಿಳಿಸಿದ್ದಾಳೆ.

ಈ ಘಟನೆ ಪೆನ್‌ಷನ್ ಮೊಹಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಮಾಹಿತಿ ಪಡೆದ ಪೊಲೀಸರು ಪ್ರಕರಣದ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ ಅಪರಿಚಿತನ ಗುರುತು ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯಿಂದ ಸ್ಥಳೀಯ ನಿವಾಸಿಗಳಲ್ಲಿ ಆತಂಕ ಮೂಡಿದ್ದು, ಶಾಲಾ ಮಕ್ಕಳ ಸುರಕ್ಷತೆಗಾಗಿ ಪೊಲೀಸರು ಹೆಚ್ಚುವರಿ ಗಸ್ತು ನಡೆಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಜನಸಂಪರ್ಕ ಸಭೆ: ಸ್ಥಳದಲ್ಲೇ ಸಮಸ್ಯೆಗೆ ಪರಿಹಾರ

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಅಗ್ಗುಂದ ಗ್ರಾಮ ಪಂಚಾಯಿತಿ ಆವರಣದಲ್ಲಿ ಮಂಗಳವಾರ ನಡೆದ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಸ್ಥಳದಲ್ಲೇ ಹಲವು ಸಮಸ್ಯೆಗಳನ್ನು ಪರಿಹರಿಸಲಾಯಿತು.



ಸಭೆಯಲ್ಲಿ 48 ಅರ್ಜಿಗಳು ಸ್ವೀಕಾರವಾಗಿದ್ದು, ಅದರಲ್ಲಿ ಸ್ಥಳದಲ್ಲೇ ಸುಮಾರು 31 ಅರ್ಜಿಗಳ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹಾರ ಮಾಡಲಾಯಿತು. ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿಪೂಜೆ, ಕಂದಾಯ ಇಲಾಖೆ ವ್ಯಾಪ್ತಿಯ ಹಲವು ಸಮಸ್ಯೆ, ಸಣ್ಣ ನೀರಾವರಿ ಇಲಾಖೆ ಸೇರಿ ವಿವಿಧ ಇಲಾಖೆಗೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳ ಅಹವಾಲು ಸ್ವೀಕರಿಸಿ ಪರಿಹಾರ ಕಂಡಕೊಳ್ಳುವ ನಿಟ್ಟಿನಲ್ಲಿ ಚರ್ಚಿಸಲಾಯಿತು.

ತಹಶೀಲ್ದಾರ್ ಸಂತೋಷ್ ಕುಮಾರ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಜಿಲ್ಲಾ ಅಧಿಕಾರಿ ನಾಗೇಂದ್ರ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಗಂಗಣ್ಣನವರ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019